SDGCC
SUSTAINABLE DEVELOPMENT GOALS COORDINATION CENTRE

ಕರ್ನಾಟಕ ಸರ್ಕಾರ

UNDP

SUSTAINABLE DEVELOPMENT GOALS

ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ದಿನಗಳು - ವಾರ್ಷಿಕ ಪುಸ್ತಕ

ಜಾಗತಿಕತೆಯಿಂದ

ಸ್ಥಳೀಯತೆ ಕಡೆಗೆ ಹೆಜ್ಜೆ..

ಯಾರನ್ನೂ ಹಿಂದಕ್ಕೆ ಬಿಡದಿರೋಣ

ಶ್ರೀ ಬಸವರಾಜ ಬೊಮ್ಮಾಯಿ
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

ಸಂದೇಶ



2015ರಲ್ಲಿ, ವಿಶ್ವಸಂಸ್ಥೆಯ 193 ಸದಸ್ಯ ರಾಷ್ಟ್ರಗಳು ಅಂಗೀಕರಿಸಿದ **ಸುಸ್ಥಿರ ಅಭಿವೃದ್ಧಿಗಾಗಿ 2030ರ ಕಾರ್ಯಸೂಚಿಯು** ಜನರು ಮತ್ತು ಗ್ರಹದ ಶಾಂತಿ ಮತ್ತು ಸಮೃದ್ಧಿಗಾಗಿ ನೀಲಿನಕ್ಷೆಯನ್ನು ಒದಗಿಸುತ್ತದೆ. ಭಾರತವೂ ಸೇರಿದಂತೆ ಎಲ್ಲ ಸದಸ್ಯ ರಾಷ್ಟ್ರಗಳು **17 ಸುಸ್ಥಿರ ಅಭಿವೃದ್ಧಿ ಗುರಿಗಳನ್ನು (ಎಸ್‌ಡಿಜಿಗಳು)** ಸಮರ್ಪಕವಾಗಿ ಜಾರಿಗೊಳ್ಳುವಂತೆ ಕ್ರಮ ಕೈಗೊಳ್ಳಲು ಸಾರ್ವತ್ರಿಕ ಕರೆಯನ್ನು ಇಲ್ಲಿ ನೀಡಲಾಗಿದೆ. ರಾಜ್ಯದಲ್ಲಿ ಎಸ್‌ಡಿಜಿ ಗುರಿಗಳನ್ನು ಸಾಧಿಸುವಲ್ಲಿ ಕರ್ನಾಟಕವು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಈ ಮೂಲಕ 2030ರೊಳಗೆ ಹಾಕಿಕೊಳ್ಳಲಾದ ಲಕ್ಷ್ಯಗಳನ್ನು ತಲುಪುವ ಗುರಿಯನ್ನು ಹೊಂದಲಾಗಿದೆ.

ಕರ್ನಾಟಕವು **ಎಸ್‌ಡಿಜಿಗಳ ಬಗ್ಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ** ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದೆ. ಮುಖ್ಯವಾಗಿ **ದುರ್ಬಲ ಜನ ಸಮೂಹಗಳ ಅಭಿವೃದ್ಧಿಯ ಮೇಲೆ** ಕೇಂದ್ರೀಕರಿಸಿದೆ. ಈಗಾಗಲೇ, ಪೋಸ್ಟರ್‌ಗಳು, ಕೈಪಿಡಿಗಳು ಮತ್ತು ವೀಡಿಯೊಗಳಂತಹ ಎಸ್‌ಡಿಜಿ ಸಂವಹನ ಸಾಧನಗಳ ಮುಖಾಂತರ ಪರಿಣಾಮಕಾರಿ ಸಂದೇಶವನ್ನು ರೂಪಿಸಿ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಬೆಂಬಲಿಸಲು ವಿವಿಧ ಪಾಲುದಾರರನ್ನು ಉತ್ತೇಜಿಸಲಾಗಿದೆ. ಈ ಪುಸ್ತಕವು, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ದಿನಗಳಿಗೆ ಎಸ್‌ಡಿಜಿ ಚಿಂತನೆಗಳನ್ನು ಹೊಂದಾಣಿಕೆ ಮಾಡುವ ಮೂಲಕ ಜನರಿಗೆ ಜಾಗೃತಿ ಮೂಡಿಸುವುದರ ಜೊತೆಗೆ ಅದರ ಕಾರ್ಯಾನುಷ್ಠಾನ ಮಾಡುವಂತೆ ಮಾಡುವ ಒಂದು ಅತ್ಯುತ್ತಮ ಉಪಕ್ರಮವಾಗಿದೆ. ಎಸ್‌ಡಿಜಿ ಸಮನ್ವಯ ಕೇಂದ್ರ (ಎಸ್‌ಡಿಜಿಸಿಸಿ), ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯೊಂದಿಗೆ ಜಂಟಿಯಾಗಿ ಕಾರ್ಯನಿರ್ವಹಣೆ ಮಾಡುತ್ತಿದ್ದು, ಜವಾಬ್ದಾರಿಯುತ ಕ್ರಮಗಳತ್ತ ಜನರನ್ನು ಪ್ರೇರೇಪಿಸಲು ಈ ರೀತಿಯ ಅನೇಕ ಮಾಹಿತಿ, ಶಿಕ್ಷಣ ಮತ್ತು ಸಂವಹನ (ಐಇಸಿ) ಸಾಧನಗಳನ್ನು ಸಿದ್ಧಪಡಿಸುತ್ತದೆ.

ಸೃಜನಶೀಲ ಸಾಧನಗಳು ಹಾಗೂ ಆಕರ್ಷಕ ಪೋಸ್ಟರ್ಗಳನ್ನು ಸಿದ್ಧಪಡಿಸುವ ಮೂಲಕ ಜಾಗೃತಿ ಮೂಡಿಸುವ ಕಾರ್ಯಗಳು ಹೆಚ್ಚು ಹೆಚ್ಚು ಆಗಬೇಕಿದ್ದು, ಇವುಗಳನ್ನು ಸಾಮಾಜಿಕ ಜಾಲತಾಣಗಳು ಸೇರಿದಂತೆ **ಡಿಜಿಟಲ್ ವೇದಿಕೆಗಳಲ್ಲಿ ಹಂಚಿಕೊಳ್ಳಲು** ನಾನು ಎಲ್ಲಾ ಇಲಾಖೆಗಳನ್ನು ಒತ್ತಾಯಿಸುತ್ತೇನೆ. **ನಮ್ಮ ಗೌರವಾನ್ವಿತ ಪ್ರಧಾನ ಮಂತ್ರಿಗಳ ಕಲ್ಪನೆಯಂತೆ ಜನ ಭಾಗೀದಾರಿಯ** ನಿಜವಾದ ಸ್ಫೂರ್ತಿಯೊಂದಿಗೆ ಸರ್ಕಾರವು ಒದಗಿಸುವ ವಿವಿಧ ಕಾರ್ಯಕ್ರಮಗಳು ಮತ್ತು ಸೌಲಭ್ಯಗಳ ಬಗ್ಗೆ ಜಾಗೃತಿ ಮೂಡಿಸಲು ನಾವು ಪಾಲುದಾರರನ್ನು ವಿಶೇಷವಾಗಿ ಅತ್ಯಂತ ಹಿಂದುಳಿದ ಸಮೂಹಗಳನ್ನು ತಲುಪಬೇಕು.

ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಕೇವಲ ಸರ್ಕಾರದ ಜವಾಬ್ದಾರಿಯಾಗಿ ನೋಡದೇ, ಪ್ರತಿಯೊಬ್ಬ ನಾಗರಿಕರು ಕರ್ತವ್ಯವಾಗಿ ನೋಡಬೇಕು ಮತ್ತು ಪಾಲಿಸಬೇಕು. ಜವಾಬ್ದಾರಿಯುತ ಬೆಳವಣಿಗೆ ಮತ್ತು ಬಳಕೆಯ ಮೂಲಕ ಹೆಚ್ಚು ಸಮಾನತೆಯ ವಾತಾವರಣವನ್ನು ಸೃಷ್ಟಿಸಲು ಗುರಿಗಳು ಕಾರ್ಯನಿರ್ವಹಣೆ ಮಾಡುತ್ತಿರುವುದರಿಂದ ಕರ್ನಾಟಕವು 2030ರ ಎಸ್‌ಡಿಜಿ ಗುರಿಗಳನ್ನು ಸಾಧಿಸುವುದನ್ನು ಖಚಿತಪಡಿಸಿಕೊಳ್ಳಲು ನಾವೆಲ್ಲರೂ ಮುಂದಡಿ ಇಡೋಣ!

ಶ್ರೀ ಮುನಿರತ್ನ ನಾಯ್ಡು
ಸಚಿವರು,
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ
ಕರ್ನಾಟಕ ಸರ್ಕಾರ

ಸಂದೇಶ

ಪ್ರಗತಿಪರ ದೃಷ್ಟಿಕೋನ ಹೊಂದಿರುವ ಕರ್ನಾಟಕವು 2030ರ ವೇಳೆಗೆ ಸುಸ್ಥಿರ ಅಭಿವೃದ್ಧಿ ಗುರಿಗಳ (ಎಸ್‌ಡಿಜಿ) ಲಕ್ಷ್ಯಗಳನ್ನು ಸಾಧಿಸಲು ಎದುರು ನೋಡುತ್ತಿದೆ. ಎಸ್‌ಡಿಜಿಗಳು ಜಾಗತಿಕ ಸಮುದಾಯದ ಆಕಾಂಕ್ಷೆಗಳನ್ನು ಪ್ರತಿನಿಧಿಸುತ್ತವೆ. ಸಾಮಾಜಿಕ, **ಆರ್ಥಿಕ ಮತ್ತು ಪರಿಸರ ಆಯಾಮಗಳಲ್ಲಿ ಪ್ರಗತಿ ಸಾಧಿಸಲು** ಸರ್ಕಾರಗಳು ಸಾರ್ವತ್ರಿಕವಾಗಿ ಒಪ್ಪಿಕೊಂಡಿವೆ. **“**ಸುಸ್ಥಿರ ಅಭಿವೃದ್ಧಿ ಗುರಿ 2030: ಕರ್ನಾಟಕಕ್ಕಾಗಿ ಕಾರ್ಯತಂತ್ರಗಳು ಮತ್ತು ಕ್ರಿಯಾ ಯೋಜನೆ**”** ಮುಖಾಂತರ ರಾಜ್ಯದ ಬದ್ಧತೆಯನ್ನು ಸಾಬೀತುಪಡಿಸುವ ಸಂಬಂಧ ಎಸ್‌ಡಿಜಿಗಳನ್ನು ಸಾಧಿಸಲು ಒಂದು ದೂರದೃಷ್ಟಿಯ ಚೌಕಟ್ಟು ಹಾಗೂ ಎಲ್ಲ ಮಧ್ಯಸ್ಥಗಾರರಿಂದ ದೃಢ ಕ್ರಮದ ಅಗತ್ಯವಿದೆ.

ಮಾಹಿತಿ, ಶಿಕ್ಷಣ ಮತ್ತು ಸಂವಹನ (ಐಇಸಿಗಳು) ಸಾಮಾನ್ಯ ಜನರಿಗೆ ಜಾಗೃತಿ ಮೂಡಿಸಲು ಮತ್ತು ಅಪೇಕ್ಷಿತ ಫಲಿತಾಂಶವನ್ನು ಸಾಧಿಸುವ ತಂತ್ರಗಳಲ್ಲಿ ಒಂದಾಗಿದೆ. ಯುಎನ್‌ಡಿಪಿಯ ಸುಸ್ಥಿರ ಅಭಿವೃದ್ಧಿ ಗುರಿಗಳ ಸಮನ್ವಯ ಕೇಂದ್ರ (ಎಸ್‌ಡಿಜಿಸಿಸಿ), ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಭಾಗವಾಗಿದ್ದು, ಎಸ್‌ಡಿಜಿಗಳ ಬಗ್ಗೆ ಜಾಗೃತಿ ಮೂಡಿಸಲು ಹಲವಾರು ಐಇಸಿಗಳನ್ನು ರಚಿಸಿದೆ. ಅಂತಹ ಒಂದು ಪ್ರಯತ್ನವೆಂದರೆ **ಎಸ್‌ಡಿಜಿಗಳನ್ನು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ದಿನಗಳಿಗೆ ಜೋಡಿಸಿ** ಜಾಗೃತಿ ಸಂದೇಶವನ್ನು ರಚಿಸುವುದಾಗಿದೆ. ಈ ವಿಧಾನವು ಇಡೀ ವರ್ಷ ಸ್ಥಳೀಯ ಕ್ರಿಯೆಯ ಮೂಲಕ ಜಾಗತಿಕ ಗುರಿಗಳನ್ನು ಸಾಧಿಸುವತ್ತ ಗಮನ ಹರಿಸುತ್ತದೆ.

ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ದಿನಗಳನ್ನೊಳಗೊಂಡ ಈ ಪುಸ್ತಕದ ಬಿಡುಗಡೆಗೆ ಅನುಮತಿ ನೀಡಲು ನನಗೆ ಸಂತೋಷವಾಗುತ್ತಿದೆ. ನನ್ನ ದೃಷ್ಟಿಯಲ್ಲಿ ಈ ಪುಸ್ತಕವು ಜಾಗೃತಿಯನ್ನು ಮೂಡಿಸಲು ಸಹಾಯ ಮಾಡುವುದಲ್ಲದೆ, ಪ್ರತಿಯೊಬ್ಬರಿಗೂ ತುರ್ತು ಸ್ಪಂದನಶೀಲ ಹಾಗೂ ಉತ್ಸಾಹದಿಂದ ನಡೆದುಕೊಳ್ಳುವಂತೆ ಕರೆ ನೀಡುತ್ತದೆ. ಕಾರ್ಯಾನುಷ್ಠಾನದ ಕಡೆಗೆ ಒಂದೊಂದೇ ಹೆಜ್ಜೆಯನ್ನಿಡುವ ಮೂಲಕ, **ಯಾರನ್ನೂ ಹಿಂದಕ್ಕೆ ಬಿಡದೆ** ಸುಸ್ಥಿರ ಭವಿಷ್ಯಕ್ಕಾಗಿ ನಾವೆಲ್ಲರೂ ಕೈ ಜೋಡಿಸೋಣ!

ಶ್ರೀ ಮುನಿರತ್ನ ನಾಯ್ಡು
ಸಚಿವರು

ಶ್ರೀಮತಿ ವಂದಿತಾ ಶರ್ಮ, ಐಎಎಸ್
ಮುಖ್ಯ ಕಾರ್ಯದರ್ಶಿ
ಕರ್ನಾಟಕ ಸರ್ಕಾರ

ಸಂದೇಶ

ಸುಸ್ಥಿರ ಅಭಿವೃದ್ಧಿ ಗುರಿಗಳು (ಎಸ್ಡಿಜಿ) 2030 ರ ವೇಳೆಗೆ ಉತ್ತಮ ಜಗತ್ತನ್ನು ಸೃಷ್ಟಿಸಲು ವಿಶ್ವಸಂಸ್ಥೆಯು ಅಳವಡಿಸಿಕೊಂಡ 17 ಜಾಗತಿಕ ಗುರಿಗಳಾಗಿವೆ. ಪ್ರಮುಖವಾಗಿ, ಈ ಎಸ್ಡಿಜಿಗಳು **ಬಡತನ, ಹಸಿವು, ಆರೋಗ್ಯ, ಶಿಕ್ಷಣ, ಹವಾಮಾನ ಬದಲಾವಣೆ, ಲಿಂಗ ಸಮಾನತೆ, ನೀರು** ಸೇರಿದಂತೆ ಸಾಮಾಜಿಕ-ಆರ್ಥಿಕ ಅಭಿವೃದ್ಧಿ ಸಮಸ್ಯೆಗಳನ್ನು ಪರಿಹರಿಸುತ್ತವೆ. ನೈರ್ಮಲ್ಯ, ಇಂಧನ, ಪರಿಸರ ಮತ್ತು ಸಾಮಾಜಿಕ ಸಮಸ್ಯೆಗಳ ವಿಶಾಲ ವ್ಯಾಪ್ತಿಯನ್ನು ಇದು ಒಳಗೊಂಡಿದೆ. ದೇಶದ ಸುಸ್ಥಿರ ಭವಿಷ್ಯಕ್ಕಾಗಿ ಈ 17 ಗುರಿಗಳನ್ನು ಸಾಧಿಸಲು ಭಾರತ ಬದ್ಧವಾಗಿದೆ. ರಾಷ್ಟ್ರೀಯ ಮಟ್ಟದಲ್ಲಿ ಎಸ್ಡಿಜಿ ಗಳ ಅನುಷ್ಠಾನವನ್ನು ನೀತಿ ಆಯೋಗವು ಮೇಲ್ವಿಚಾರಣೆ ಮಾಡುತ್ತಿದ್ದರೆ, ಕರ್ನಾಟಕದಲ್ಲಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯು ಈ ಗುರಿಗಳನ್ನು ಸಾಧಿಸಲು ಕಾರ್ಯತಂತ್ರಗಳನ್ನು ರೂಪಿಸುತ್ತದೆ.

2020-21 ರ ಎಸ್ಡಿಜಿ ಭಾರತ ಸೂಚ್ಯಂಕದಲ್ಲಿ ಕರ್ನಾಟಕವು 72 ಅಂಕಗಳೊಂದಿಗೆ ಮೂರನೇ ಸ್ಥಾನದಲ್ಲಿದೆ. ಇದು, 2019-20 ರ ಹಿಂದಿನ ಸ್ಕೋರ್ 66 ಕ್ಕಿಂತ ಸುಧಾರಣೆಯಾಗಿದೆ. ಈ ಮಹತ್ವದ ಪ್ರಗತಿಯು ಶ್ಲಾಘನೀಯವಾಗಿದ್ದರೂ ಕೂಡಾ, ರಾಜ್ಯದ ಸವಾಲುಗಳನ್ನು ಎದುರಿಸಲು ನಾವು ಶ್ರಮಿಸಬೇಕಾಗಿದೆ. **13.16% ರಷ್ಟಿರುವ ಬಡತನ** ಮತ್ತು ಕ್ರಮವಾಗಿ **45% ಮತ್ತು 65% ರಷ್ಟಿರುವ ಮಹಿಳೆಯರ ಮತ್ತು ಮಕ್ಕಳ ರಕ್ತಹೀನತೆಯಂತಹ ಸಮಸ್ಯೆಗಳಿಗೆ** ತಕ್ಷಣದ ಗಮನ ನೀಡಬೇಕಾಗಿದೆ. **ಉನ್ನತ ಶಿಕ್ಷಣದಲ್ಲಿ, ಅದರಲ್ಲೂ ವಿಶೇಷವಾಗಿ ಹುಡುಗಿಯರಲ್ಲಿ ದಾಖಲಾತಿಯನ್ನು ಹೆಚ್ಚಿಸಲು ರಾಜ್ಯವು ಕಾರ್ಯನಿರ್ವಹಿಸುವುದನ್ನು ಮುಂದುವರಿಸಬೇಕಾಗಿದೆ; ಹಳೆಯುಳಿಕೆ ಇಂಧನ ಬಳಕೆ ಮತ್ತು ಏಕ-ಬಳಕೆಯ ಪ್ಲಾಸ್ಟಿಕ್ಗಳನ್ನು ಕಡಿಮೆ ಮಾಡಬೇಕಾಗಿದೆ. ಮಕ್ಕಳು ಮತ್ತು ಮಹಿಳೆಯರ ಮೇಲಿನ ಅಪರಾಧಗಳನ್ನು ಕಡಿಮೆ ಮಾಡಿ ಸುರಕ್ಷಿತ ರಾಜ್ಯವನ್ನಾಗಿ ಪರಿವರ್ತಿಸಬೇಕಾಗಿದೆ.**

ರಾಜ್ಯದ ಸಮಸ್ಯೆಗಳನ್ನು ಪರಿಹರಿಸಲು ಜನರಲ್ಲಿ ಜಾಗೃತಿ ಮೂಡಿಸುವುದು ಕೂಡಾ ಅತ್ಯಂತ ಅಗತ್ಯ ಕ್ರಮಗಳಲ್ಲಿ ಒಂದಾಗಿದೆ. ಈ ನಿಟ್ಟಿನಲ್ಲಿ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಸಮನ್ವಯದೊಂದಿಗೆ ಯುಎನ್ಡಿಪಿ-ಸುಸ್ಥಿರ ಅಭಿವೃದ್ಧಿ ಗುರಿಗಳ ಸಮನ್ವಯ ಕೇಂದ್ರವು (ಎಸ್ಡಿಜಿಸಿಸಿಯು) ಮಾಹಿತಿಯುಕ್ತ ಸಂವಹನ ಅಭಿಯಾನಗಳ ಮೂಲಕ ಪ್ರಮುಖ ಮಾಹಿತಿಯನ್ನು ಪ್ರಸಾರ ಮಾಡುವ ಕಾರ್ಯವನ್ನು ಕೈಗೊಂಡಿದೆ.

ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಆಚರಣೆಗಳು ವಿವಿಧ ವಿಷಯಗಳ ಕುರಿತು ಪ್ರಚಾರ ಮಾಡುವುದಲ್ಲದೆ, ಜಾಗೃತಿಯನ್ನು ಮೂಡಿಸುವಲ್ಲಿ **ಮತ್ತು ಅಂತರವನ್ನು ನಿವಾರಿಸುಲ್ಲಿ ಸಂಪನ್ಮೂಲಗಳನ್ನು ಸಜ್ಜುಗೊಳಿಸಲು** ಸಹಾಯ ಮಾಡುತ್ತದೆ. ಎಸ್ ಡಿ ಜಿ ಸಿ ಸಿ ಯು 80 ಕ್ಕೂ ಹೆಚ್ಚು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಆಚರಣೆಗಳ ನಿರ್ದಿಷ್ಟ ದಿನಗಳನ್ನು ಗುರುತಿಸಿ, ಮಾಹಿತಿ-ಶಿಕ್ಷಣ-ಸಂವಹನ (ಐಇಸಿ) ಸಾಮಾಗ್ರಿಗಳನ್ನು ತಯಾರಿಸಿದೆ ಮಾತ್ರವಲ್ಲ ಇವುಗಳನ್ನು ಸುಸ್ಥಿರ ಅಭಿವೃದ್ಧಿ ಗುರಿಗಳಿಗೆ ಜೋಡಿಸಲಾದ ಕ್ರಿಯೆ-ಆಧಾರಿತ ಕಾರ್ಯತಂತ್ರಗಳನ್ನು ಉತ್ತೇಜಿಸಲು ರಚಿಸಿದೆ. ಈ ಐಇಸಿಗಳು ಸ್ಥಳೀಯ ಕ್ರಿಯೆಯ ಮೂಲಕ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸುವುದರ ಮೇಲೆ ಕೇಂದ್ರೀಕರಿಸುತ್ತವೆ ಮತ್ತು ಜಾಗತಿಕ ಗುರಿಗಳಿಗೆ ಕೊಡುಗೆ ನೀಡುತ್ತವೆ. ಆ ಮೂಲಕ ಸುಸ್ಥಿರ ಭವಿಷ್ಯವನ್ನು ಸೃಷ್ಟಿಸುವ ಆಶಯನ್ನು ಹೊಂದಿದೆ.

ಈ ಐಇಸಿಗಳು **ಎಲ್ಲಾ ಮಧ್ಯಸ್ಥಗಾರರನ್ನು ಕಾರ್ಯನಿರ್ವಹಿಸಲು ಪ್ರೋತ್ಸಾಹಿಸುವ ಮೂಲಕ** ಸಮಾಜದಲ್ಲಿ ಯಾರನ್ನೂ ಹಿಂದೆ ಬಿಡದೆ, ನಿಗದಿತ ಗುರಿಗಳನ್ನು ಸಾಧಿಸಲು ಪ್ರೋತ್ಸಾಹಿಸುತ್ತವೆ ಎಂದು ನಾನು ಭಾವಿಸುತ್ತೇನೆ!

ಡಾ. ಶಾಲಿನಿ ರಜನೀಶ್, ಐ.ಎ.ಎಸ್.,
ಅಪರ ಮುಖ್ಯ ಕಾರ್ಯದರ್ಶಿ
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ
ಕರ್ನಾಟಕ ಸರ್ಕಾರ

ಸ್ವೀಕೃತಿ

ಎಷ್ಟೇ ನಿರ್ಬಂಧಗಳಿರಲಿ, ಸವಾಲುಗಳು ಬರಲಿ ಅವುಗಳ ನಡುವೆಯೇ ಅಪೇಕ್ಷಿತ ಫಲಿತಾಂಶಗಳನ್ನು ಯಶಸ್ವಿಯಾಗಿ ಸಾಧಿಸುವುದರಲ್ಲಿ ಯೋಜನೆಯ ಸಾರ ಅಡಗಿದೆ! ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳಿಗೆ ಧನ್ಯವಾದ ಸಲ್ಲಿಸಬಯಸುತ್ತೇನೆ. ಸಾಮಾನ್ಯವಾಗಿ ಮತ್ತು ನಿರ್ದಿಷ್ಟವಾಗಿ ಸರ್ಕಾರಗಳಲ್ಲಿ ಜನರನ್ನು ವ್ಯೂಹಾತ್ಮಕ ಕಾರ್ಯತಂತ್ರ ಕ್ರಮದ ಕಡೆಗೆ ಕೊಂಡೊಯ್ಯಲು ವಿಶ್ವವು ಏಕರೂಪತೆ ಮತ್ತು ಒಮ್ಮತವನ್ನು ಹೊಂದಿದೆ.

ನಾವು ವರ್ಷವಿಡೀ **85 ರಾಷ್ಟ್ರೀಯ ದಿನಗಳು, ಹಬ್ಬಗಳು ಮತ್ತು ಅಂತಾರಾಷ್ಟ್ರೀಯ ವಿಶೇಷ ದಿನಗಳನ್ನು** ಆಚರಿಸಿದ್ದೇವೆ. ಆದರೆ, ಇವುಗಳು ಆ ಹೊತ್ತಿನ ಆಚರಣೆಗಷ್ಟೇ ಸೀಮಿತವಾಗಿ ಮುಂದಿನ ವರ್ಷದ ವಿಶೇಷ ದಿನ ಬರುವಷ್ಟರಲ್ಲಿ ಮರೆತುಬಿಟ್ಟಿರುತ್ತೇವೆ! ಇದಲ್ಲದೆ, ಜಾಗತಿಕ ಮತ್ತು ರಾಷ್ಟ್ರೀಯ ಸೂಚ್ಯಂಕಗಳ ಮೂಲಕ ಪ್ರಮುಖ ಮೈಲಿಗಲ್ಲುಗಳ ಸ್ಥಿರ ಮಾಪನವನ್ನು ನಾವು ಹೊಂದಿದ್ದೇವೆ. ಯೋಜನಾ ಇಲಾಖೆಯಲ್ಲಿ ಯುಎನ್‌ಡಿಪಿ ನೆರವಿನ ಎಸ್‌ಡಿಜಿ ಸಮನ್ವಯ ಕೇಂದ್ರ (ಎಸ್‌ಡಿಜಿಸಿಸಿ)ವು ನೈಜ ದತ್ತಾಂಶ ವಿಶ್ಲೇಷಣೆ ಮತ್ತು ಮೌಲ್ಯಮಾಪನ ಅಧ್ಯಯನಗಳ ಆಧಾರದ ಮೇಲೆ ನಿರ್ದಿಷ್ಟ **'ಕ್ರಿಯಾ ಕಾರ್ಯಸೂಚಿ'**ಯೊಂದಿಗೆ ಈ ಸಮರ್ಪಿತ ದಿನಗಳನ್ನು ಬಳಸಿಕೊಳ್ಳಲು ಪ್ರಯತ್ನಿಸಿದೆ.

ಐಇಸಿ ಸಾಮಗ್ರಿಗಳನ್ನು ರಚಿಸುವ ಉದ್ದೇಶವು ಇಲಾಖಾ ಅಧಿಕಾರಿಗಳು, ಮಾಧ್ಯಮಗಳು ಮತ್ತು ಇತರ ಎಲ್ಲ ಮಧ್ಯಸ್ಥಗಾರರಿಗೆ ನಮ್ಮ ರಾಜ್ಯ / ಸಮಾಜದಲ್ಲಿ ಅಸ್ತಿತ್ವದಲ್ಲಿರುವ ಅಭಿವೃದ್ಧಿ ಅಂತರಗಳ ಬಗ್ಗೆ ಮತ್ತು ಅವುಗಳನ್ನು ಹೋಗಲಾಡಿಸಲು ನಮ್ಮಲ್ಲಿ ಪ್ರತಿಯೊಬ್ಬರೂ ಏನು ಮಾಡಬಹುದು ಎಂಬುದರ ಬಗ್ಗೆ ಸಂವೇದನಾಶೀಲಗೊಳಿಸುವುದಾಗಿದೆ!. ಯುಎನ್‌ಡಿಪಿಯ ಪರಿಣತಿಯೊಂದಿಗೆ ನವೀನ ಮತ್ತು ಕಾಲಮಿತಿಯ ಕ್ರಿಯಾ ಅಂಶಗಳನ್ನು ರಚಿಸಲು ಇಲಾಖಾವಾರು ವಸ್ತುಸ್ಥಿತಿಗಳನ್ನು ಸಂಯೋಜಿಸಿದ ಶ್ರೀಮತಿ ರೂಪಾ ಗೌಡ ಮತ್ತು ಶ್ರೀಮತಿ ಶೋಭಾ ವೇಗಸ್ ಹಾಗೂ ಅವರಿಗೆ ಈ ನಿಟ್ಟಿನಲ್ಲಿ ಅಗತ್ಯ ಸಲಹೆಗಳನ್ನು ನೀಡಿದ ಎಸ್‌ಡಿಜಿಸಿಸಿ ಯೋಜನಾ ಮುಖ್ಯಸ್ಥ ಡಾ. ಮುಕುಂದ್ ರಾಜ್ ಅವರಿಗೆ ನಾನು ಧನ್ಯವಾದಗಳನ್ನು ತಿಳಿಸುತ್ತೇನೆ.

ನಮ್ಮ ಗೌರವಾನ್ವಿತ ಮುಖ್ಯಮಂತ್ರಿಗಳು, ಯೋಜನಾ ಸಚಿವರು ಮತ್ತು ಮುಖ್ಯ ಕಾರ್ಯದರ್ಶಿಗಳ ಸಮರ್ಥ ನಾಯಕತ್ವದಲ್ಲಿ ನಾವು 2030 ಕ್ಕಿಂತ ಮುಂಚಿತವಾಗಿ ನಾವು ಸುಸ್ಥಿರ ಗುರಿಗಳನ್ನು ಸಾಧಿಸುತ್ತೇವೆ ಎಂದು ನಾನು ಆಶಿಸುತ್ತೇನೆ!

ಇಣುಕು ನೋಟ

ವರ್ಷದ ಪ್ರತಿಯೊಂದು ದಿನವೂ ತನ್ನದೇ ಆದ ವೈಶಿಷ್ಟತೆಯಿಂದ ಕೂಡಿದ ಆಚರಣೆಯಾಗಿದೆ. ಮನುಕುಲವನ್ನು ಅನನ್ಯ ರೀತಿಯಲ್ಲಿ ಪ್ರೇರೇಪಿಸಲು–ಕೆಲವು ದಿನಗಳನ್ನು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ದಿನಗಳಾಗಿ ಗುರುತಿಸಲಾಗುತ್ತದೆ. ಇದು ಜಾಗತೀಕ ಗಮನವನ್ನು ಸಳೆಯುವಲ್ಲಿ, ಅಗತ್ಯವಿರುವ ಕಾಳಜಿಯ ವಿಷಯಗಳ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಸಮುದಾಯಕ್ಕೆ ಶಿಕ್ಷಣ ನೀಡುವಲ್ಲಿ ಮಹತ್ತರ ಪಾತ್ರವನ್ನು ವಹಿಸುತ್ತದೆ.

ಯಾರನ್ನೂ ಹಿಂದಕ್ಕೆ ಬಿಡದೆ, ಸುಸ್ಥಿರ ಗ್ರಹದ ಸುತ್ತ ಈ ಪುಸ್ತಕವು ಸಂಭಾಷಣೆಗಳನ್ನು ಪ್ರೇರೇಪಿಸುವ ಮೂಲಕ ಪುಸ್ತಕದ ಹಾಳೆಗಳ ಮಾತುಗಳು, ಕ್ರಿಯೆಗಳಾಗಿ ಬದಲಾಗುವ ಪ್ರಕ್ರಿಯೆಯಾಗುತ್ತದೆ. ಮಾನವೀಯತೆಯ ಮೌಲ್ಯಗಳನ್ನು ಎತ್ತಿಹಿಡಿಯುವ ಸುಮಾರು 85 ದಿನಗಳನ್ನು ನಾವು ಗುರುತಿಸಿದ್ದೇವೆ. ಈ ಮೂಲಕ ಸ್ಥಳೀಯ ಕ್ರಮಗಳನ್ನು ಕೈಗೊಂಡು, ಜಾಗತೀಕ ಗುರಿಗಳಿಗೆ ಕೊಡುಗೆ ನೀಡುವ ಮೂಲಕ ಸ್ಥಳೀಯ ಕೈಂಕರ್ಯಕ್ಕೆ ನಾಂದಿಹಾಡಲು ಅವಕಾಶವನ್ನು ಒದಗಿಸುತ್ತದೆ.

ಡಿಜಿಟಲ್ ಯುಗದ ಬೆಳವಣಿಗೆಯು ಅನಿಯಮಿತ ದತ್ತಾಂಶ ಮತ್ತು ಮಾಹಿತಿಗಳನ್ನು ಜನರ ಕೈಗೆಟಕುವಂತೆ ಮಾಡಿದೆ. ಅದಾಗ್ಯೂ, ನಮ್ಮ ಸುತ್ತ–ಮುತ್ತ ನಡೆಯುವ ವಿಷಯಗಳ ಬಗ್ಗೆ ಅರಿವಿನ ಕೊರತೆಯಿರುವಂತೆ ತೋರುತ್ತಿದೆ. ಹಾಗಾಗಿ ನಾವು ಈ ಸಮಸ್ಯೆಗಳ ಬಗ್ಗೆ ಓದುಗರಿಗೆ ತಿಳಿಸಲು ಇಚ್ಛಿಸುತ್ತೇವೆ

ನಿಮ್ಮ ನೆಚ್ಚಿನ ಪೇಯವನ್ನು(ಕಾಫಿ/ಟೀ) ಸೇವಿಸಲು ಮತ್ತು ಈ ಅರಿವಿನ ಗೊಂಚಲನ್ನು ಆನಂದಿಸಲು ನಾವು ಓದುಗರನ್ನು ಪ್ರೇರೇಪಿಸುತ್ತೇವೆ. ಇದು ಸುಸ್ಥಿರ ಅಭಿವೃದ್ಧಿ ಜಗತ್ತಿನ ವಿಷಯಗಳ ಬಗ್ಗೆ ಮಾಹಿತಿಯನ್ನು ಒದಗಿಸುತ್ತದೆ. ಈ ಪುಸ್ತಕವು ಓದುಗರನ್ನು ಸಾಮಾಜಿಕ ಅಭಿವೃದ್ಧಿಯಲ್ಲಿ ತೊಡಗಿಸಿಕೊಳ್ಳಲು ಪ್ರೇರೇಪಿಸುತ್ತದೆ ಮತ್ತು ಮಾನವೀಯತೆಗೆ ಸಂಬಂಧಿಸಿದ ವಿಷಯಗಳ ಕುರಿತು ತಮ್ಮ ಸ್ನೇಹಿತರು ಮತ್ತು ಸಮುದಾಯಗಳ ನಡುವೆ ಆರೋಗ್ಯಕರ ಸಂವಾದವನ್ನು ಬೆಳೆಸುತ್ತದೆ ಎಂದು ನಾವು ಭಾವಿಸುತ್ತೇವೆ

ನೀವು ಕುಡಿಯುವ ಪ್ರತಿಯೊಂದು ಗುಟುಕು ಕೂಡಾ ಸ್ಫೂರ್ತಿದಾಯಕ ಸಂಭಾಷಣೆಯನ್ನು ತರುತ್ತದೆ ಮತ್ತು ಬದಲಾವಣೆಗೆ ಒಂದು ಸಣ್ಣ ಹೆಜ್ಜೆ ಇಡಲು ನಿಮ್ಮನ್ನು ಪ್ರೇರೇಪಿಸುತ್ತದೆ ಎಂದು ನಾವು ಭಾವಿಸುತ್ತೇವೆ. ಇದು, ಯಾರನ್ನೂ ಹಿಂದಕ್ಕೆ ಬಿಡದಿರುವ ದೊಡ್ಡ ಗುರಿಯತ್ತ ನಿಮ್ಮ ಅಮೂಲ್ಯ ಕೊಡುಗೆಯಾಗುತ್ತದೆ!

ಡಾ.ಮುಕುಂದ್ ರಾಜ್

ಯೋಜನೆಯ ಮುಖ್ಯಸ್ಥ, ಎಸ್.ಡಿ.ಜಿ.ಸಿ.ಸಿ.

ಜಾಗತಿಕ ಸೂಚ್ಯಂಕ

ಸೂಚ್ಯಂಕ	ಜಾಗತಿಕ ಸೂಚ್ಯಂಕ ಭಾರತ		ಭಾರತ ಸೂಚ್ಯಂಕ ಕರ್ನಾಟಕ	
	ಜಾಗತಿಕ ಶ್ರೇಯಾಂಕ	ಅಂಕ	ರಾಷ್ಟ್ರೀಯ ಶ್ರೇಯಾಂಕ	ಅಂಕ
ಜಾಗತಿಕ ನಾವೀನ್ಯತೆ ಸೂಚ್ಯಂಕ	46	36.4	1	42.50
ಎಸ್ ಡಿ ಜಿ ಸೂಚ್ಯಂಕ	120	60.1	3	72.00
ಜಾಗತಿಕ ಆರೋಗ್ಯ ಭದ್ರತಾ ಸೂಚ್ಯಂಕ 2021	66	42.8	9	57.93
ಇಂಧನ ಮತ್ತು ಹವಾಮಾನ ಸೂಚ್ಯಂಕ - 2022	3	70.2	14	50.10

ಭಾರತ ಸೂಚ್ಯಂಕ

ಸೂಚ್ಯಂಕ	ದೇಶದಲ್ಲಿ # 1		ಕರ್ನಾಟಕ	
	ರಾಜ್ಯ	ಅಂಕ	ಶ್ರೇಯಾಂಕ	ಅಂಕ
ಸುಲಭ ಜೀವನಮಟ್ಟ ಸೂಚ್ಯಂಕ 2021			1	66.70
ರಫ್ತು ಸಿದ್ಧತೆ ಸೂಚ್ಯಂಕ 2021-22	ಗುಜರಾತ್	78.86	3	61.72
ವಿವಿಧ ರಾಜ್ಯಗಳಲ್ಲಿ ಲಾಜಿಸ್ಟಿಕ್ಸ್ ಸುಲಭತೆ	ಗುಜರಾತ್	3.66	8	3.18
ಆಹಾರ ಸುರಕ್ಷತೆ ಸೂಚ್ಯಂಕ	ಗುಜರಾತ್	72	9	51
ಎಸ್‌ಡಿಜಿ ನಗರ (ಅರ್ಬನ್) ಇಂಡಿಯಾ ಇಂಡೆಕ್ಸ್ 2021-22	ಶಿಮ್ಲಾ ಇಂದೋರ್	75.50	13	ಬೆಂಗಳೂರು 69.07
ಪುರಸಭೆಯ ಕಾರ್ಯಕ್ಷಮತೆ ಸೂಚ್ಯಂಕ 2021		66.08	28	ಹುಬ್ಬಳ್ಳಿ-ಧಾರವಾಡ 48.14

ಪರಿವಿಡಿ

ಜನವರಿ

01	ಹೊಸವರ್ಷದ ಸಂಕಲ್ಪ	01
15	ಮಕರ ಸಂಕ್ರಾಂತಿ	02
24	ಅಂತಾರಾಷ್ಟ್ರೀಯ ಶಿಕ್ಷಣ ದಿನ	03
24	ರಾಷ್ಟ್ರೀಯ ಹೆಣ್ಣು ಮಗುವಿನ ದಿನ	04
25	ರಾಷ್ಟ್ರೀಯ ಪ್ರವಾಸೋದ್ಯಮ ದಿನ	05
25	ರಾಷ್ಟ್ರೀಯ ಮತದಾರರ ದಿನ	06

ಫೆಬ್ರವರಿ

02	ವಿಶ್ವ ತೇವ ಭೂಮಿ ದಿನ	07
04	ವಿಶ್ವ ಕಾನ್ಸರ್ ದಿನ	08
10	ವಿಶ್ವ ದ್ವಿದಳ ದಾನ್ಯಗಳ ದಿನ	09
11	ಅಂತಾರಾಷ್ಟ್ರೀಯ ಮಹಿಳೆಯರು ಮತ್ತು ಬಾಲಕಿಯರ ವಿಜ್ಞಾನ ದಿನ	10
13	ವಿಶ್ವ ರೇಡಿಯೋ ದಿನ	11
20	ವಿಶ್ವ ಸಾಮಾಜಿಕ ನ್ಯಾಯ ದಿನ	12

ಮಾರ್ಚ್

01	ಶೂನ್ಯ ತಾರತಮ್ಯ ದಿನ	13
08	ಅಂತಾರಾಷ್ಟ್ರೀಯ ಮಹಿಳಾ ದಿನ	14
18	ಹೋಳಿ	15
22	ವಿಶ್ವ ಜಲ ದಿನ	16-20
26	ಅರ್ಥ್ ಅವರ್	21

ಏಪ್ರಿಲ್

02	ಯುಗಾದಿ (2022)	22
06	ಅಭಿವೃದ್ಧಿ ಮತ್ತು ಶಾಂತಿಗಾಗಿ ಅಂತಾರಾಷ್ಟ್ರೀಯ ಕ್ರೀಡಾ ದಿನ	23
07	ವಿಶ್ವ ಆರೋಗ್ಯ ದಿನ	24
11	ರಾಷ್ಟ್ರೀಯ ತಾಯ್ತನ ಸುರಕ್ಷಾ ದಿನ	29
18	ವಿಶ್ವ ಪಾರಂಪರಿಕ ದಿನ	30
22	ಭೂಮಿ ದಿನ	31

ಮೇ

01	ಕಾರ್ಮಿಕರ ದಿನ	32
03	ವಿಶ್ವ ಅಸ್ತಮಾ ದಿನ	33
09	ಅಮ್ಮಂದಿರ ದಿನ (ಮೇ ತಿಂಗಳ ಎರಡನೇ ಬಾನುವಾರ)	34
11	ರಾಷ್ಟ್ರೀಯ ತಂತ್ರಜ್ಞಾನ ದಿನ	35
12	ಅಂತಾರಾಷ್ಟ್ರೀಯ ಸಸ್ಯ ಆರೋಗ್ಯ ದಿನ	36
15	ಅಂತಾರಾಷ್ಟ್ರೀಯ ಕೌಟುಂಬಿಕ ದಿನ	37
20	ವಿಶ್ವ ಜೇನು ದಿನ	38
31	ವಿಶ್ವ ತಂಬಾಕು ರಹಿತ ದಿನ	39

ಜೂನ್

05	ವಿಶ್ವ ಪರಿಸರ ದಿನ	40
08	ವಿಶ್ವ ಸಾಗರ ದಿನ	41
12	ವಿಶ್ವ ಬಾಲ ಕಾರ್ಮಿಕ ವಿರೋಧಿ ದಿನ	42
14	ವಿಶ್ವ ರಕ್ತ ದಾನಿಗಳ ದಿನ	43
21	ಅಂತಾರಾಷ್ಟ್ರೀಯ ಯೋಗ ದಿನ	44

ಜುಲೈ

15	ವಿಶ್ವ ಯುವ ಕೌಶಲ್ಯ ದಿನ	45
29	ವಿಶ್ವ ಹುಲಿ ದಿನ	46
30	ವಿಶ್ವ ಮಾನವ ಕಳ್ಳಸಾಗಣೆ ವಿರೋಧಿ ದಿನ	46B

ಆಗಸ್ಟ್

12	ಅಂತಾರಾಷ್ಟ್ರೀಯ ಯುವ ದಿನ	47
19	ಅಂತಾರಾಷ್ಟ್ರೀಯ ಮಾನವತೆಯ ದಿನ	49

September

1-7	ರಾಷ್ಟ್ರೀಯ ಪೌಷ್ಟಿಕ ಸಪ್ತಾಹ	50
05	ಶಿಕ್ಷಕರ ದಿನಾಚರಣೆ	55
08	ಅಂತಾರಾಷ್ಟ್ರೀಯ ಸಾಕ್ಷರತಾ ದಿನ	56
09	ವಿಶ್ವ ಇ-ವಾಹನ ದಿನ	57
15	ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನ	58
16	ವಿಶ್ವ ಓಝೋನ್ ದಿನ	59
18	ವಿಶ್ವ ಬಿದಿರು ದಿನ	60
18	ಅಂತಾರಾಷ್ಟ್ರೀಯ ಸಮಾನ ವೇತನ ದಿನ	61
21	ವಿಶ್ವ ಅಲ್‌ಝೈಮರ್ ದಿನ	62
21	ಅಂತಾರಾಷ್ಟ್ರೀಯ ಶಾಂತಿ ದಿನ	63
25	ಅಂತ್ಯೋದಯ ದಿವಸ	64
26	ವಿಶ್ವ ಸಂತಾನ ನಿಯಂತ್ರಣ ದಿನ	65
27	ವಿಶ್ವ ಪ್ರವಾಸೋದ್ಯಮ ದಿನ	66
29	ಅಂತಾರಾಷ್ಟ್ರೀಯ ಆಹಾರ ನಷ್ಟ, ವ್ಯರ್ಥದ ಜಾಗೃತಿ ದಿನ	67

ಅಕ್ಟೋಬರ್

01	ಅಂತಾರಾಷ್ಟ್ರೀಯ ಹಿರಿಯ ನಾಗರೀಕರ ದಿನ	68
10	ವಿಶ್ವ ಮಾನಸಿಕ ಆರೋಗ್ಯ ದಿನ	69
11	ಅಂತಾರಾಷ್ಟ್ರೀಯ ಹೆಣ್ಣು ಮಕ್ಕಳ ದಿನ	70
17	ಅಂತಾರಾಷ್ಟ್ರೀಯ ಬಡತನ ನಿರ್ಮೂಲನೆ ದಿನ	71
30	ವಿಶ್ವ ಮಿತವ್ಯಯ ದಿನ	72
31	ವಿಶ್ವ ನಗರಗಳ ದಿನ	73

ನವೆಂಬರ್

14	ವಿಶ್ವ ಡಯಾಬಿಟಿಸ್ ದಿನ	74
14	ಮಕ್ಕಳ ದಿನ (ರಾಷ್ಟ್ರೀಯ)	75
19	ವಿಶ್ವ ಶೌಚಾಲಯ ದಿನ	76
25	ಅಂತಾರಾಷ್ಟ್ರೀಯ ಮಹಿಳೆಯರ ವಿರುದ್ಧದ ಹಿಂಸಾಚಾರ ದಿನ	77
26	ಸಂವಿಧಾನ ದಿನ	78

ಡಿಸೆಂಬರ್

01	ವಿಶ್ವ ಏಡ್ಸ್ ದಿನ	79
03	ಅಂತಾರಾಷ್ಟ್ರೀಯ ವಿಕಲ ಚೇತನರ ದಿನ	80
05	ವಿಶ್ವ ಮಣ್ಣಿನ ದಿನ	81
10	ಅಂತಾರಾಷ್ಟ್ರೀಯ ಮಾನವ ಹಕ್ಕುಗಳ ದಿನ	82
12	ಅಂತಾರಾಷ್ಟ್ರೀಯ ಸಾರ್ವತ್ರಿಕ ವಿಮಾ ದಿನ	83
14	ರಾಷ್ಟ್ರೀಯ ಇಂಧನ ಸಂರಕ್ಷಣಾ ದಿನ	84
22	ರಾಷ್ಟ್ರೀಯ ಗಣಿತ ದಿನ	85

ಜನವರಿ
25
ಹೊಸ ವರ್ಷ

SDGCC
SUSTAINABLE DEVELOPMENT GOALS COORDINATION CENTRE

GOVERNMENT OF KARNATAKA

UNDP

SUSTAINABLE DEVELOPMENT GOALS

ಹೊಸ ವರ್ಷದ
ಸಂಕಲ್ಪ

ಜನವರಿ
25
ಮಕರ ಸಂಕ್ರಾಂತಿ

ಜನವರಿ 24

SDGCC
SUSTAINABLE DEVELOPMENT GOALS COORDINATION CENTRE

GOVERNMENT OF KARNATAKA

UNDP

SUSTAINABLE DEVELOPMENT GOALS

ಅಂತಾರಾಷ್ಟ್ರೀಯ ಶಿಕ್ಷಣ ದಿನ

24, ಜನವರಿ

ಬದಲಾಗಲಿ ಪಠ್ಯಕ್ರಮ, ಶಿಕ್ಷಣಕ್ಕೆ ಸಿಗಲಿ ಹೊಸ ಆಯಾಮ
ನಿಮ್ಮ ಕೊಡುಗೆ ಶಿಕ್ಷಣದೆಡೆಗೆ

- ದತ್ತು ಪಡೆಯಿರಿ -ಶಾಲೆ/ತರಗತಿ/ಮಗು
- ಕ್ರೋಢೀಕರಿಸಿ- ನಿಧಿ, ಕೌಶಲ್ಯ
- ಕಂಪ್ಯೂಟರ್, ಸ್ಮಾರ್ಟ್ ಕ್ಲಾಸಿಗಿರಲಿ ನಿಮ್ಮ ಕೊಡುಗೆ
- ಡಿಜಿಟಲ್ ಶಿಕ್ಷಣ ನೀಡಿ- ಮಕ್ಕಳಿಗೆ/ಶಿಕ್ಷಕರಿಗೆ
- ವಂಚಿತ ಬಾಲಕಿಗೆ ನೀಡಿ ಉನ್ನತ ಶಿಕ್ಷಣ/ವೃತ್ತಿಪರ ತರಬೇತಿ
- ವಿಕಲಚೇತನರ ಶಿಕ್ಷಣಕೆ ಪೋಷಕರಾಗಿ
- ವೃತ್ತಿಪರತೆಗೆ ಮಾರ್ಗದರ್ಶನ ತೋರಿ

ಶಿಕ್ಷಣವು ಅಮೂಲ್ಯ – ಶಾಶ್ವತ ಉಡುಗೊರೆ
ವಂಚಿತ ಮಗುವಿಗೆ ಸಿಗಲಿ "ಶಿಕ್ಷಣ"ದ ಕೊಡುಗೆ
ಸೇರಿ ದುಡಿಯೋಣ ಸುಸ್ಥಿರ ಅಭಿವೃದ್ಧಿ ಗುರಿಗೆ

4 ಗುಣಮಟ್ಟದ ಶಿಕ್ಷಣ

ಜನವರಿ
24

SDGCC
GOVERNMENT OF KARNATAKA
UNDP
SUSTAINABLE DEVELOPMENT GOALS
ಉಣಿಸಿ ಅವಳಿಗೆ ತಾಯಿಯ ಮೊದಲ ಹಾಲ
ಆಕೆಗಿರಲಿ ಪೌಷ್ಟಿಕ ಆಹಾರ
ಕಬ್ಬಿಣಾಂಶ ಆಹಾರವೇ ಅವಳಿಗೆ ಸೂಕ್ತ
5 ಲಿಂಗ ಸಮಾನತೆ
4 ಗುಣಮಟ್ಟದ ಶಿಕ್ಷಣ
2 ಹಸಿವು ಮುಕ್ತ
3 ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮ
ಪರಿಗಣನೆಯಲಿರಲಿ ಅವಳಿಗೆ ಸಮಾನ ಸ್ಥಾನ
ನೀಡಿ ಅವಳಿಗೆ ಜೀವ-ಜೀವನ
ನೀಡಿ ಶಿಕ್ಷಣ ಅವಳಿಗದುವೇ ಭೂಷಣ
ರಾಷ್ಟ್ರೀಯ ಹೆಣ್ಣು ಮಗುವಿನ ದಿನ
24, ಜನವರಿ 2022
ಹೆಮ್ಮೆ ತರುವಳು ಮಗಳು
ಅವಳ ಸ್ವಾವಲಂಬನೆಗೆ ನೀವಾಗಿ ನೆರಳು

ಜನವರಿ 25

SDGCC
SUSTAINABLE DEVELOPMENT GOALS COORDINATION CENTRE

GOVERNMENT OF KARNATAKA

UNDP

SUSTAINABLE DEVELOPMENT GOALS

ರಾಷ್ಟ್ರೀಯ ಪ್ರವಾಸೋದ್ಯಮ ದಿನ

25, ಜನವರಿ

ಕರ್ನಾಟಕ

ಅದ್ಭುತ ಪ್ರಪಂಚ ನಿಮಗಾಗಿ ಕಾಯುತ್ತಿದೆ

ಸುಸ್ಥಿರ ಪ್ರವಾಸೋದ್ಯಮವನ್ನು ಉತ್ತೇಜಿಸಿ

- ಸ್ಥಳೀಯ ಪ್ರವಾಸ – ಸ್ಥಳೀಯ ಆದಾಯ
- ಜತೆಗಿರಲಿ ಮರುಬಳಕೆ ವಸ್ತುಗಳು (ಬಾಟಲಿ, ಮಗ್, ಚೀಲಗಳು)
- ಸ್ಥಳೀಯರ ರೆಸ್ಟೋರೆಂಟ್ / ಹೋಟೆಲ್ ಬಳಸಿ
- ಅಕ್ರಮ ವ್ಯವಹಾರಕೆ ಜೊತೆಯಾಗಬೇಡಿ

- ಸ್ಥಳೀಯ ಅಂಗಡಿ / ಮಾರುಕಟ್ಟೆಯಲ್ಲೇ ಖರೀದಿಸಿ
- ಮಾರ್ಗದರ್ಶಕರು ಸ್ಥಳೀಯರಾಗಿರಲಿ
- ಸ್ಥಳೀಯ ಜನರ ಅಭ್ಯಾಸಕ್ರಮಗಳ ಗೌರವಿಸಿ

ಧೂಮಪಾನ, ಶಬ್ದ ಮಾಲಿನ್ಯ ಪರಿಸರಕ್ಕೆ ಹಾನಿಕರ

ಅರಣ್ಯ/ ಕಡಲತೀರ / ಗಿರಿಧಾಮಗಳ ಸ್ವಚ್ಛವಾಗಿಡಿ

ಜನವರಿ 25

SDGCC
SUSTAINABLE DEVELOPMENT GOALS COORDINATION CENTRE

GOVERNMENT OF KARNATAKA

UNDP

SUSTAINABLE DEVELOPMENT GOALS

ರಾಷ್ಟ್ರೀಯ ಮತದಾರರ ದಿನ

25, ಜನವರಿ

"ಯಾವ ಮತದಾರರನ್ನೂ ಹಿಂದಕ್ಕೆ ಬಿಡದಿರಿ"

ನಿಮ್ಮ ಪ್ರತಿ ಮತವೂ ಅಮೂಲ್ಯ

- ನಿಮ್ಮ ಮತದಾನದ ಹಕ್ಕನ್ನು ಚಲಾಯಿಸಲು
- ನಿಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡಲು
- ಆತ್ಮವಿಶ್ವಾಸ ಮತ್ತು ಒಳಗೊಳ್ಳುವಿಕೆಯ ಬಗ್ಗೆ ಹೆಮ್ಮೆಪಡಲು
- ಪ್ರಜಾಪ್ರಭುತ್ವ ದೇಶದ ಹೆಮ್ಮೆಯ ಪ್ರಜೆಯಾಗಲು

ಮತಪಟ್ಟಿಯಲಿ ಒಳಗೊಳ್ಳಲು ಇಂದೇ ನೋಂದಾಯಿಸಿ : https://www.nvsp.in/

ಫೆಬ್ರವರಿ
02


SDGCC
SUSTAINABLE DEVELOPMENT GOALS COORDINATION CENTRE
GOVERNMENT OF KARNATAKA
UNDP
SUSTAINABLE DEVELOPMENT GOALS
ತೇವಭೂಮಿಯ ಅನುಕೂಲಗಳು
ನೀರು ಶುದ್ಧೀಕರಣ
ಮೀನು, ವನ್ಯಜೀವಿ ಮತ್ತು ಸಸ್ಯಗಳ ಆವಾಸಸ್ಥಾನ
ಶಿಕ್ಷಣ ಮತ್ತು ಸಂಶೋಧನೆ
ಪ್ರವಾಹದಿಂದ ರಕ್ಷಣೆ
ಕರಾವಳಿ ತೀರ ರಕ್ಷಣೆ
ಅಂತರ್ಜಲ ಮರುಪೂರಣ
ಜೀವನೋಪಾಯಕ್ಕೆ ಆಧಾರ
ಮನೋರಂಜನೆ ಮತ್ತು ಮಾನಸಿಕ ಆರೋಗ್ಯ
ವಿಶ್ವ ತೇವಭೂಮಿ ದಿನ
13 ಹವಾಮಾನದ ಬಗ್ಗೆ ಕ್ರಮ
15 ಭೂಮಿ ಮೇಲಿನ ಜೀವರಾಶಿ
1 ಬಡತನದ ನಿರ್ಮೂಲನೆ
2, ಫೆಬ್ರವರಿ
2 ಹಸಿವು ಮುಕ್ತ
3 ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮ
4 ಗುಣಮಟ್ಟದ ಶಿಕ್ಷಣ
ಜನ ಮತ್ತು ಪ್ರಕೃತಿಯ ಒಳಿತಿಗೆ ತೇವಭೂಮಿ
ನೀವೇನು ಮಾಡಬಹುದು?
ತ್ಯಾಜ್ಯ ಮತ್ತು ಕಸವನ್ನು ಕಡಿಮೆ ಮಾಡಿ ಮರುಬಳಕೆ ವಸ್ತುಗಳನ್ನು ಬಳಕೆ ಮಾಡಿ
ಕೀಟನಾಶಕ ಮತ್ತು ರಸಗೊಬ್ಬರದ ಮಿತವ್ಯಯ ಬಳಕೆ
ಮನೆಯಲ್ಲಿ ಕಾಂಪೋಸ್ಟ್ ಗುಂಡಿಯನ್ನು ನಿರ್ಮಿಸಿ, ನಿರ್ವಹಿಸಿ
ಸರೋವರ, ನದಿ, ಸಾಗರ ಮತ್ತು ಕಾಡುಗಳನ್ನು ಕಲುಷಿತಗೊಳಿಸಬೇಡಿ
ಅಂತರ್ಜಲ ಶೋಷಣೆ ನಿಲ್ಲಿಸಿ
ನಿಮ್ಮ ಸಾಕುಪ್ರಾಣಿಗಳನ್ನು ನಿಯಂತ್ರಣದಲ್ಲಿಡಿ
ಮಳೆ ನೀರು ವ್ಯರ್ಥವಾಗುವುದನ್ನು ತಪ್ಪಿಸಿ
ತೇವಪ್ರದೇಶಗಳು ಭೂಮಿಯ ಜೀವಾಳ, ನಮ್ಮಿಂದಲೇ ಅವುಗಳ ಸಂರಕ್ಷಣೆ

ಫೆಬ್ರವರಿ
04

SDGCC
SUSTAINABLE DEVELOPMENT GOALS COORDINATION CENTRE

GOVERNMENT OF KARNATAKA

UNDP | SUSTAINABLE DEVELOPMENT GOALS

ವಿಶ್ವ ಕ್ಯಾನ್ಸರ್ ದಿನ

04, ಫೆಬ್ರವರಿ

3 ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮ

ಆರೈಕೆಯ ಅಂತರ ಕಡಿಮೆಗೊಳಿಸೋಣ; ಆರೋಗ್ಯಕರ ಬದುಕು ರೂಪಿಸೋಣ

ಕ್ಯಾನ್ಸರ್ ತಡೆಗಟ್ಟುವಿಕೆಗೆ ಯುಕ್ತ ಸಲಹೆಗಳು

✓ ನಿಯಮಿತ ವೈದ್ಯಕೀಯ ತಪಾಸಣೆ	✗ ಮದ್ಯ ಸೇವನೆಗೆ ಕಡಿವಾಣ
✓ ಸಮತೋಲಿತ ಆರೋಗ್ಯಕರ ಆಹಾರ	✗ ತಂಬಾಕು ಸೇವನೆಗೆ ನಕಾರ
✓ ಸಮತೋಲಿತ ತೂಕ	✗ ಅತಿಯಾದ ವಿಕಿರಣಗಳಿಂದ ದೂರ
✓ ನಿತ್ಯ ವ್ಯಾಯಾಮ	✗ ಕೈಗಾರಿಕಾ ಮತ್ತು ಪರಿಸರ ವಿಷಾನಿಲ ಸೇವನೆ ತಪ್ಪಿಸಿ
✓ ಪರಿಪೂರ್ಣ ನಿದ್ರೆ	✗ ಅಪಾಯಕಾರಿ ನಡವಳಿಕೆಗಳಿಂದ ದೂರ

ಫೆಬ್ರವರಿ 10

SDGCC
SUSTAINABLE DEVELOPMENT GOALS COORDINATION CENTRE

GOVERNMENT OF KARNATAKA

UNDP | SUSTAINABLE DEVELOPMENT GOALS

ವಿಶ್ವ ದ್ವಿದಳ ಧಾನ್ಯಗಳ ದಿನ

10, ಫೆಬ್ರವರಿ 2022

2 ಹಸಿವು ಮುಕ್ತ

3 ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮ

ದ್ವಿದಳ ಧಾನ್ಯಗಳು	ಪ್ರಯೋಜನಗಳು
ಕಬ್ಬಿಣಾಂಶದ ಉತ್ತಮ ಮೂಲ	ಅಪೌಷ್ಟಿಕತೆ ನಿವಾರಣೆ
ಅಧಿಕ ಪೊಟ್ಯಾಶಿಯಮ್	ಜೀರ್ಣ ಕ್ರಿಯೆ ಮತ್ತು ಸ್ನಾಯು ಚಲನೆಗೆ ಸಹಕಾರಿ
ಸಸ್ಯ ಆಧಾರಿತ ಪ್ರೋಟೀನ್ ಮೂಲ	ದೇಹಕ್ಕೆ ಪ್ರೋಟೀನ್ ಪೂರೈಕೆ
ಫೋಲೇಟ್‌ನ ಅತ್ಯುತ್ತಮ ಮೂಲ	ನರವ್ಯೂಹದ ಕಾರ್ಯ ಸುಧಾರಣೆ ಮತ್ತು ಭ್ರೂಣ ದೋಷ ನಿವಾರಣೆ
ಹೆಚ್ಚಿನ ನಾರಿನಂಶ	ತಗ್ಗಲಿದೆ ಹೃದಯ ಸಂಬಂಧಿ ಕಾಯಿಲೆಗಳ ಅಪಾಯ
ಕಡಿಮೆ ಕೊಬ್ಬಿನಾಂಶ ಮತ್ತು ಕೊಲೆಸ್ಟ್ರಾಲ್‌ರಹಿತ	ತಗ್ಗಲಿದೆ ಹೃದಯ ಸಂಬಂಧಿ ಕಾಯಿಲೆಗಳ ಅಪಾಯ
ಕಡಿಮೆ ಗ್ಲೈಸೆಮಿಕ್ ಸೂಚಿ ಆಹಾರಗಳು	ರಕ್ತದಲ್ಲಿನ ಸಕ್ಕರೆ ಅಂಶದ ಸಮತೋಲನ
ಸ್ವಾಭಾವಿಕವಾಗಿ ಗ್ಲುಟೆನ್ (ಅಂಟು) ಮುಕ್ತ	ಸೆಲಿಯಾಕ್ ಕಾಯಿಲೆಗೆ ಉತ್ತಮ ಆಯ್ಕೆ
ದೀರ್ಘಕಾಲದವರೆಗೆ ಸಂಗ್ರಹಯೋಗ್ಯ	ಆಹಾರದ ವೈವಿಧ್ಯತೆ ಹೆಚ್ಚಳಕ್ಕೆ ಸಹಾಯಕ

ಗ್ರಹ ಮತ್ತು ಆರೋಗ್ಯಕರ ಆಹಾರಕ್ಕಾಗಿ ದ್ವಿದಳ ಧಾನ್ಯಗಳನ್ನು ಪ್ರೀತಿಸಿ

ಫೆಬ್ರವರಿ 11

SDGCC
SUSTAINABLE DEVELOPMENT GOALS COORDINATION CENTRE

GOVERNMENT OF KARNATAKA

UNDP
SUSTAINABLE DEVELOPMENT GOALS

ಅಂತಾರಾಷ್ಟ್ರೀಯ ಮಹಿಳೆಯರು ಮತ್ತು ಬಾಲಕಿಯರ ವಿಜ್ಞಾನ ದಿನ

11, ಫೆಬ್ರವರಿ



ವಿಜ್ಞಾನದಲ್ಲಿ ಮಹಿಳೆ ಮತ್ತು ಬಾಲಕಿಯರ ಭಾಗವಹಿಸುವಿಕೆಗೆ ಸಿಗಲಿ ಪೂರ್ಣ–ಸಮಾನ ಪ್ರವೇಶ

- ವಿಜ್ಞಾನ ಆಟಿಕೆ ಮತ್ತು ಕಿಟ್‌ಗಳಿರಲಿ ಹೆಣ್ಣು ಮಗಳಿಗೆ
- ಚಂದಾದಾರರಾಗಿ ವಿಜ್ಞಾನ ನಿಯತಕಾಲಿಕೆಗಳಿಗೆ
- ಸೂಕ್ಷ್ಮದರ್ಶಕದ ಉಡುಗೊರೆ ನೀಡಿ ಮಗಳಿಗೆ
- ಪ್ರೋತ್ಸಾಹಿಸಿ ಹೆಣ್ಣುಮಕ್ಕಳ ಉನ್ನತ ಶಿಕ್ಷಣಕ್ಕೆ
- ಯುವತಿಯರಲ್ಲಿ ಮೂಡಿಸಿ ಸಂಶೋಧನಾ ಪ್ರವೃತ್ತಿ
- ವಿಜ್ಞಾನದಲ್ಲಿನ ಮಹಿಳಾ ಸಾಧಕರ ಪರಿಚಯಿಸಿ
- ವಿಶೇಷ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸಿ
- ಕಲಿಕೆಯ ಅವಕಾಶಗಳನ್ನು ಬೆಂಬಲಿಸಿ

ಸೃಜನಶೀಲದಿಂದ ಆವಿಷ್ಕಾರದೆಡೆಗೆ, ಆವಿಷ್ಕಾರದಿಂದ ವಿಜ್ಞಾನಿಯಾಗುವತ್ತ ಇರಲಿ ಮಗಳ ಚಿತ್ತ

ಫೆಬ್ರವರಿ 13

SDGCC
SUSTAINABLE DEVELOPMENT GOALS COORDINATION CENTRE

GOVERNMENT OF KARNATAKA

UNDP

SUSTAINABLE DEVELOPMENT GOALS

ವಿಶ್ವ ರೇಡಿಯೋ ದಿನ

13, ಫೆಬ್ರವರಿ

ರೇಡಿಯೋ ಎಂಬ ನಂಬಿಕೆ – ಪ್ರಾದೇಶಿಕತೆಯ ವೇದಿಕೆ

- ಸ್ಥಳೀಯ ರೇಡಿಯೋದಲ್ಲಿ ನಿಮ್ಮ ಧ್ವನಿ ಬಿತ್ತರಗೊಳ್ಳಲಿ
- ನಿಮ್ಮ ಪ್ರತಿಭೆ ಮತ್ತು ಜ್ಞಾನದ ಹಂಚಿಕೆಯಾಗಲಿ
- ಸ್ಥಳೀಯ ಉತ್ತಮ ಅಭ್ಯಾಸಗಳ ಗುರುತಿಸಿ, ಹಂಚಿಕೊಳ್ಳಿ
- ರೇಡಿಯೋಗೆ ಸ್ಥಳೀಯ ಸುದ್ದಿಗಳ ಒದಗಿಸಿ
- ಜನಕೆ ಸಿಗಲಿ ಸಾಮಾಜಿಕ ನ್ಯಾಯ ವಿಷಯಗಳ ಶಿಕ್ಷಣ

ರೇಡಿಯೋ ಬಳಸಿ; ಜ್ಞಾನ ಹೆಚ್ಚಿಸಿ

ಫೆಬ್ರವರಿ 20

ವಿಶ್ವ ಸಾಮಾಜಿಕ ನ್ಯಾಯ ದಿನ



ಮಾರ್ಚ್ 01

SDGCC
SUSTAINABLE DEVELOPMENT GOALS COORDINATION CENTRE
GOVERNMENT OF KARNATAKA
UNDP
SUSTAINABLE DEVELOPMENT GOALS
ಶೂನ್ಯ
ತಾರತಮ್ಯ ದಿನ
01, ಮಾರ್ಚ್
ಅವರು ಹೇಗೇ ಇರಲಿ, ಎಲ್ಲಿಂದಲೇ ಬಂದಿರಲಿ ಅಥವಾ
ಯಾರನ್ನೇ ಪ್ರೀತಿಸಲಿ, ಅದ್ಯಾವುದೂ ಮುಖ್ಯವಲ್ಲ
ಪರಿಪೂರ್ಣವಾಗಿ ಮತ್ತು ಸಮೃದ್ಧವಾಗಿ ಘನತೆಯಿಂದ
ಬದುಕುವ ಹಕ್ಕು ಅವರಿಗಿದೆ.
ನಾವೆಲ್ಲರೂ ಮಾನವರು
ನಾವೆಲ್ಲರೂ ಸಮಾನರು
ತಾರತಮ್ಯವನ್ನು ನಿಲ್ಲಿಸಿ

ಮಾರ್ಚ್
08

SDGCC
SUSTAINABLE DEVELOPMENT GOALS COORDINATION CENTRE

GOVERNMENT OF KARNATAKA

UNDP

SUSTAINABLE DEVELOPMENT GOALS

ಮಾರ್ಚ್

ಅಂತಾರಾಷ್ಟ್ರೀಯ ಮಹಿಳಾ ದಿನ

ಸುಸ್ಥಿರ ನಾಳೆಗಾಗಿ ಇಂದೇ ಸಿಗಲಿ ಲಿಂಗ ಸಮಾನತೆ

- ಬೇಡಾ ಚಿನ್ನ ಹೂಡಿಕೆ; ನೀಡಿ ಶಿಕ್ಷಣ ಬಾಲೆಗೆ
- ಮಹಿಳೆಗಿರಲಿ ಹೆಚ್ಚಿನ ಉದ್ಯೋಗಾವಕಾಶ
- ಆರೈಕೆ ಕೆಲಸಕ್ಕೆ ಸಿಗಲಿ ಮೌಲ್ಯ
- ಮಹಿಳಾ ನಾಯಕತ್ವ- ನಿರ್ಧಾರಕಿರಲಿ ಪ್ರೋತ್ಸಾಹ
- ಮಹಿಳಾ ಉದ್ದಿಮೆಗಿರಲಿ ನಿಮ್ಮ ಬೆಂಬಲ

ಮಾರ್ಚ್
18


SDGCC
SUSTAINABLE DEVELOPMENT GOALS COORDINATION CENTRE
GOVERNMENT OF KARNATAKA
U N D P
SUSTAINABLE DEVELOPMENT GOALS
ತಿಲಕ ಇಟ್ಟು ಹೋಳಿ ಆಚರಿಸೋಣ
ಜಲ – ಗಿಡ – ಪರಿಸರ ಕಾಪಾಡೋಣ
ಎಲ್ಲರಿಗೂ
ಹೋಳಿ ಹಬ್ಬದ
ಶುಭಾಶಯಗಳು
18, ಮಾರ್ಚ್
3 ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮ
6 ಸ್ವಚ್ಛ ನೀರು ಮತ್ತು ನೈರ್ಮಲ್ಯ
13 ಹವಾಮಾನದ ಬಗ್ಗೆ ಕ್ರಮ
15 ಭೂಮಿ ಮೇಲಿನ ಜೀವರಾಶಿ

ಮಾರ್ಚ್ 22



SDGCC
SUSTAINABLE DEVELOPMENT GOALS COORDINATION CENTRE
GOVERNMENT OF KARNATAKA
UNDP
SUSTAINABLE DEVELOPMENT GOALS
ವಿಶ್ವ ಜಲ ದಿನ
ಅಂತರ್ಜಲ ಸಂರಕ್ಷಣೆ ನಮ್ಮೆಲ್ಲರ ಹೊಣೆ
22 ಮಾರ್ಚ್
6 ಸ್ವಚ್ಛ ನೀರು ಮತ್ತು ನೈರ್ಮಲ್ಯ
ಅಂತರ್ಜಲವೆಂಬ ಗುಪ್ತನಿಧಿಯಲ್ಲಿದೆ ನಮ್ಮ ಜೀವ ಸೆಲೆ;
ನಿಲ್ಲಲಿ ಅವುಗಳ ಅತಿ ಶೋಷಣೆ
ಅಂತರ್ಜಲ ದೃಷ್ಟಿಗೆ ಅಗೋಚರ;
ಮನದ ಗೋಚರದಿ ಸದಾ ಇರಲಿ ಜೀವಂತ

ಮಾರ್ಚ್ 22

ಸರಿಯಾದ ಕ್ರಮ ಮತ್ತು ತಪ್ಪು ಕ್ರಮ



ಮಾರ್ಚ್ 22

ಸರಿಯಾದ ಕ್ರಮ ಮತ್ತು ತಪ್ಪು ಕ್ರಮ

ಮಾರ್ಚ್ 22

ಸರಿಯಾದ ಕ್ರಮ ಮತ್ತು ತಪ್ಪು ಕ್ರಮ

ಮಾರ್ಚ್ 22

ಸರಿಯಾದ ಕ್ರಮ ಮತ್ತು ತಪ್ಪು ಕ್ರಮ

ಮಾರ್ಚ್ 26

SDGCC
SUSTAINABLE DEVELOPMENT GOALS COORDINATION CENTRE
GOVERNMENT OF KARNATAKA
UNDP
SUSTAINABLE DEVELOPMENT GOALS
ಅರ್ಥ್ ಅವರ್
60 ನಿಮಿಷ
26, ಮಾರ್ಚ್
ಕೇವಲ ೬೦ ನಿಮಿಷಗಳಲ್ಲಿ ಪ್ರಭಾವ ಬೀರಿರಿ!
ಒಂದು ಗಂಟೆ ಅವಧಿಗೆ ನೀವಿರುವೆಡೆ ದೀಪಗಳನ್ನೆಲ್ಲ ಆರಿಸಿ
ರಾತ್ರಿ 8:30 ರಿಂದ ರಾತ್ರಿ 9.30
13 ಹವಾಮಾನದ ಬಗ್ಗೆ ಕ್ರಮ
ನಮ್ಮ- ನಿಮ್ಮೆಲ್ಲರ ಭವಿಷ್ಯ ಹಾಗೂ ಗ್ರಹದ ಉಳಿಕೆಗೆ ಲಕ್ಷಾಂತರ ಜನರೊಂದಿಗೆ ಕೈಜೋಡಿಸಿ !

ಏಪ್ರಿಲ್
02

SDGCC
SUSTAINABLE DEVELOPMENT GOALS COORDINATION CENTRE
GOVERNMENT OF KARNATAKA
U N D P
SUSTAINABLE DEVELOPMENT GOALS
ಯುಗಾದಿ ಹಬ್ಬದ
ಶುಭಾಶಯಗಳು
2 ಹಸಿವು ಮುಕ್ತ
2 ಏಪ್ರಿಲ್
3
ಬೆಲ್ಲ ---------→ ರಕ್ತಹೀನತೆಗೆ ತಡೆ
ಬೇವು ---------→ ಪ್ರತಿ ರಕ್ಷಣಾ ವ್ಯವಸ್ಥೆ
ಹಸಿರು ಮಾವಿನಹಣ್ಣು ---------→ ರೋಗನಿರೋಧಕ ಶಕ್ತಿ
ಬೇಳೆ ಒಬ್ಬಟ್ಟು ---------→ ಸ್ನಾಯು ಬಲ
ಯುಗಾದಿ ಪಚಡಿ ---------→ ವಾತ, ಪಿತ್ತ, ಕಫ ಸ್ವಚ್ಛತೆ
ನಿಮಗೂ, ನಿಮ್ಮ ಕುಟುಂಬದವರಿಗೂ ಯುಗಾದಿ ಆರೋಗ್ಯ, ಸಂತಸ, ಶಾಂತಿಯನ್ನು ತರಲಿ

ಏಪ್ರಿಲ್ 06

SDGCC
SUSTAINABLE DEVELOPMENT GOALS COORDINATION CENTRE

GOVERNMENT OF KARNATAKA

UNDP | SUSTAINABLE DEVELOPMENT GOALS

ಅಭಿವೃದ್ಧಿ ಮತ್ತು ಶಾಂತಿಗಾಗಿ
ಅಂತಾರಾಷ್ಟ್ರೀಯ ಕ್ರೀಡಾ ದಿನ

6 ಏಪ್ರಿಲ್

ಕ್ರೀಡೆಯಿಂದ ಸಾಧ್ಯ ಸರ್ವರಿಗೂ ಸುಸ್ಥಿರ ಮತ್ತು ಶಾಂತಿಯುತ ಭವಿಷ್ಯ

- 3 ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮ
- 5 ಲಿಂಗ ಸಮಾನತೆ
- 10 ಅಸಮಾನತೆಗಳ ಇಳಿಕೆ
- 13 ಹವಾಮಾನದ ಬಗ್ಗೆ ಕ್ರಮ
- 16 ಶಾಂತಿ, ನ್ಯಾಯ ಮತ್ತು ಸದೃಢ ಸಂಸ್ಥೆಗಳು

ಕ್ರೀಡೆಯ ಕೊಡುಗೆ

- ಮಕ್ಕಳು/ಯುವಜನತೆ/ವಯಸ್ಕರ ಕ್ರಿಯಾಶೀಲತೆ, ಸಂವಹನಕೆ ಸಾಕ್ಷಿ
- ಸಾಮಾಜಿಕ ಕಟ್ಟುಪಾಡುಗಳ ಕೊನೆ
- ಶಾಂತಿ, ಪಾಲ್ಗೊಳ್ಳುವಿಕೆಗೆ ಉತ್ತೇಜನ
- ಭಾವನೆಗಳಿಗೆ ಸೂಕ್ತ ವೇದಿಕೆ
- ಎಲ್ಲ ಲಿಂಗ, ಜನಾಂಗ, ಧರ್ಮದವರ ಪಾಲ್ಗೊಳ್ಳುವಿಕೆ

ಏಪ್ರಿಲ್ 07

SDGCC
SUSTAINABLE DEVELOPMENT GOALS COORDINATION CENTRE

GOVERNMENT OF KARNATAKA

UNDP

SUSTAINABLE DEVELOPMENT GOALS

7 ಏಪ್ರಿಲ್

ವಿಶ್ವ ಆರೋಗ್ಯ ದಿನ

3 ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮ

ಆರೋಗ್ಯಕರ ಭವಿಷ್ಯಕ್ಕಾಗಿ ಶುದ್ಧ ಗಾಳಿ, ನೀರು ಮತ್ತು ಆಹಾರ

2 ಹಸಿವು ಮುಕ್ತ
6 ಸ್ವಚ್ಛ ನೀರು ಮತ್ತು ನೈರ್ಮಲ್ಯ
7 ಅಗ್ಗವಾದ ಮತ್ತು ಶುದ್ಧ ಶಕ್ತಿ
13 ಹವಾಮಾನದ ಬಗ್ಗೆ ಕ್ರಮ
15 ಭೂಮಿ ಮೇಲಿನ ಜೀವರಾಶಿ

ಶುದ್ಧ ಗಾಳಿ

- ನಿಮ್ಮದಾಗಲಿ ಸೈಕ್ಲಿಂಗ್/ನಡಿಗೆ
- ಹೆಜ್ಜೆ ಇಡಿ ಸ್ಥಿರತೆಯತ್ತ ಕಡೆಗೆ
- ಬದಲಾಗಿ ಮರುಪೂರಣ ಇಂಧನದೆಡೆಗೆ
- ಹೆಚ್ಚು ಗಿಡ ನೆಡಿ, ಒತ್ತು ಕೊಡಿ ಹಸಿರಿಗೆ

ಶುದ್ಧ ನೀರು

- ಇರಲಿ ನೀರಿನ ಮಿತ ಬಳಕೆ
- ಆಗಲಿ ತೇವಭೂಮಿ ಸಂರಕ್ಷಣೆ
- ಮಿತವಾಗಲಿ ರಾಸಾಯನಿಕ ಬಳಕೆ
- ನಮ್ಮಿಂದಾಗಲಿ ವಸ್ತುಗಳ ಮರುಬಳಕೆ

ಪೌಷ್ಟಿಕ ಆಹಾರ

- ಸಾಕಷ್ಟು ತರಕಾರಿ, ಹಣ್ಣುಗಳ ಬಳಸಿ
- ಧಾನ್ಯ, ಪ್ರೋಟೀನ್ ಆಹಾರ ಸೇವಿಸಿ
- ಅತಿ ಸಂಸ್ಕರಿತ ಆಹಾರ ತ್ಯಜಿಸಿ
- ಮದ್ಯ, ತಂಬಾಕುಗಳ ವರ್ಜಿಸಿ

SDGCC
SUSTAINABLE DEVELOPMENT GOALS COORDINATION CENTRE

GOVERNMENT OF KARNATAKA

UNDP | SUSTAINABLE DEVELOPMENT GOALS

ಕೋವಿಡ್-19

ಮುನ್ನೆಚ್ಚರಿಕೆ + ಲಸಿಕೆ ಪಡೆಯುವಿಕೆ = ಸುರಕ್ಷತೆ

ಕೋವಿಡ್-19 ರಿಂದ ನಿಮ್ಮನ್ನು ರಕ್ಷಿಸಲು ವ್ಯಾಕ್ಸಿನ್ ಹಾಕಿಸಿಕೊಳ್ಳಿ

ಲಸಿಕೆ ಪಡೆಯಲು ಯಾರು ಅರ್ಹರು?
ಯಾರಿಗೆ ಮೊದಲು ಲಸಿಕೆ ಸಿಗಬೇಕು?

- 18+ — 18 ವರ್ಷ ಮೇಲ್ಪಟ್ಟ ಎಲ್ಲರೂ ಅರ್ಹರು
- ಮನೆ ಹಿರಿಯರಿಗೆ ಮೊದಲ ಆದ್ಯತೆ ಕೊಡಿ
- ಒಟ್ಟು ಎರಡು ಡೋಸ್ ಲಸಿಕೆ ಪಡೆಯಿರಿ
- 28 Days — 28 ದಿನಗಳ ಬಳಿಕ ಎರಡನೆಯ ಲಸಿಕೆ ಪಡೆಯಿರಿ
- ಎರಡನೇ ಡೋಸ್ ಪಡೆದ 2 ವಾರಗಳ ಬಳಿಕ ದೇಹದಲ್ಲಿ ಪ್ರತಿಕಾಯ ಶಕ್ತಿ ವೃದ್ಧಿ

ಮನೆಯಲ್ಲಿರಿ
ಸುರಕ್ಷಿತವಾಗಿರಿ

SDGCC SUSTAINABLE DEVELOPMENT GOALS COORDINATION CENTRE

GOVERNMENT OF KARNATAKA

UNDP | SUSTAINABLE DEVELOPMENT GOALS

ಕೋವಿಡ್-19

ಮುನ್ನೆಚ್ಚರಿಕೆ + ಲಸಿಕೆ ಪಡೆಯುವಿಕೆ = ಸುರಕ್ಷತೆ

ಲಸಿಕೆ ನೋಂದಣಿ ಪ್ರಕ್ರಿಯೆ ಹೇಗೆ..?

1) www.cowin.gov.in ಗೆ ಲಾಗಿನ್ ಆಗಿ ಮೊಬೈಲ್ ಸಂಖ್ಯೆ ನಮೂದಿಸಿ

2. ಒಟಿಪಿ ನಮೂದಿಸಿ
3. ಪುಟ ತೆರೆದುಕೊಂಡಾಗ ಫೋಟೋ ಸಹಿತ ಗುರುತಿನ ದಾಖಲೆ, ಅದರ ಸಂಖ್ಯೆ, ದಾಖಲೆಯಲ್ಲಿರುವ ಹೆಸರು, ಲಿಂಗ, ಹುಟ್ಟಿದ ವರ್ಷ ದಾಖಲಿಸಿ.
4. ಇದೇ ಮಾದರಿ ನಿಮ್ಮ ಕುಟುಂಬದ ನಾಲ್ವರ ಮಾಹಿತಿ ದಾಖಲಿಸಿ, ಸಮಯ ನಿಗದಿ ಮೇಲೆ ಕ್ಲಿಕ್ ಮಾಡಿ
5. ಪಿನ್‌ಕೋಡ್/ಜಿಲ್ಲೆ ನಮೂದಿಸಿ ದಿನಾಂಕ ಹಾಗೂ ಸಮೀಪದ ಆಸ್ಪತ್ರೆ ಆಯ್ಕೆ ಮಾಡಿ



ನೋಂದಣಿಗಾಗಿ ಬೇಕಾಗುವ ಯಾವುದಾದರೂ ಒಂದು ದಾಖಲಾತಿ

- ಆಧಾರ್ ಕಾರ್ಡ್
- ಪ್ಯಾನ್ ಕಾರ್ಡ್
- ಚಾಲನಾ ಪರವಾನಗಿ
- ಮತದಾರರ ಗುರುತಿನ ಚೀಟಿ
- ಪಿಂಚಣಿ ಪಾಸ್‌ಬುಕ್
- ಎನ್‌ಪಿಆರ್ ಸ್ಮಾರ್ಟ್ ಕಾರ್ಡ್
- ಪಾಸ್‌ಪೋರ್ಟ್

ಮನೆಯಲ್ಲಿರಿ ಸುರಕ್ಷಿತವಾಗಿರಿ

SDGCC
SUSTAINABLE DEVELOPMENT GOALS COORDINATION CENTRE

GOVERNMENT OF KARNATAKA

UNDP | SUSTAINABLE DEVELOPMENT GOALS

ಕೋವಿಡ್-19

ಮುನ್ನೆಚ್ಚರಿಕೆ + ಲಸಿಕೆ ಪಡೆಯುವಿಕೆ = ಸುರಕ್ಷತೆ

ಲಸಿಕೆ ಪಡೆದ ನಂತರ ತೆಗೆದುಕೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳು

ಲಸಿಕೆ ಪಡೆಯುವಾಗ/ಪಡೆದ ಮೇಲೆ ನೀವು ಏನು ಮಾಡಬೇಕು?

ಮಾಸ್ಕ್ ಧರಿಸಿರಿ

ಕೈಗಳಿಗೆ ಸ್ಯಾನಿಟೈಸರ್ ಬಳಸುತ್ತಿರಿ

ಸಾಮಾಜಿಕ ಅಂತರ ಕಾಯ್ದುಕೊಳ್ಳಿ



ಲಸಿಕೆ ಪಡೆದ ಅರ್ಧ ಗಂಟೆ ಲಸಿಕಾ ಕೇಂದ್ರದಲ್ಲೇ ವಿಶ್ರಾಂತಿ ಪಡೆಯಿರಿ

ಆರೋಗ್ಯದಲ್ಲಿ ತೊಂದರೆ ಅಥವಾ ಅಸ್ವಸ್ಥತೆ ಕಂಡುಬಂದರೆ ಕೂಡಲೇ ವೈದ್ಯರ ಸಂಪರ್ಕಿಸಿ

ನಿಮ್ಮ ಮತ್ತು ಕುಟುಂಬದವರ ಸುರಕ್ಷತೆ ಹೇಗಿರಬೇಕು..?

- ಮನೆಯಲ್ಲೇ ಇರಿ - ಸೋಂಕಿನ ಕೊಂಡಿ ತಪ್ಪಿಸಿ
- ಮೂಗು-ಬಾಯಿ ಮುಚ್ಚುವಂತೆ ಮಾಸ್ಕ್ ಧರಿಸಿ
- ಸೋಂಕಿತ ಲಕ್ಷಣದವರಿಂದ ದೂರವೇ ಇರಿ
- ಸರ್ಕಾರದ ಮಾರ್ಗಸೂಚಿಗಳನ್ನು ತಪ್ಪದೇ ಪಾಲಿಸಿ

ಮನೆಯಲ್ಲಿರಿ
ಸುರಕ್ಷಿತವಾಗಿರಿ

SDGCC
SUSTAINABLE DEVELOPMENT GOALS COORDINATION CENTRE

GOVERNMENT OF KARNATAKA

UNDP | SUSTAINABLE DEVELOPMENT GOALS

ಕೋವಿಡ್-19

ಮುನ್ನೆಚ್ಚರಿಕೆ + ಲಸಿಕೆ ಪಡೆಯುವಿಕೆ = ಸುರಕ್ಷತೆ

ಕೋವಿಡ್-19 ರಿಂದ ನಿಮ್ಮನ್ನು-ನಿಮ್ಮವರನ್ನು ಸಂರಕ್ಷಿಸಿಕೊಳ್ಳಿ

ಮಾಸ್ಕ್ ಹಾಕಿ

ಸಾಮಾಜಿಕ ಅಂತರ ಕಾಪಾಡಿಕೊಳ್ಳಿ

ಕೈಗಳನ್ನು ಸಾಬೂನಿನಿಂದ ತೊಳೆಯಿರಿ

ಎಲ್ಲೆಂದರಲ್ಲಿ ಉಗುಳಬೇಡಿ

ಬಿಸಿ ನೀರು, ಪೌಷ್ಟಿಕಾಂಶಯುಕ್ತ ತಾಜಾ ಆಹಾರ ಸೇವಿಸಿ

ರೋಗ ಲಕ್ಷಣಗಳು ಕಂಡುಬಂದರೆ ವೈದ್ಯರ ಸಂಪರ್ಕಿಸಿ

ಮನೆಯಲ್ಲಿರಿ ಸುರಕ್ಷಿತವಾಗಿರಿ

ಏಪ್ರಿಲ್ 11

SDGCC SUSTAINABLE DEVELOPMENT GOALS COORDINATION CENTRE | GOVERNMENT OF KARNATAKA | UNDP | SUSTAINABLE DEVELOPMENT GOALS

ರಾಷ್ಟ್ರೀಯ ತಾಯ್ತನ ಸುರಕ್ಷತಾ ದಿನ

11 ಏಪ್ರಿಲ್

ತಾಯ್ತನವೆಂಬುದು ಶ್ರೇಷ್ಠ ವರ

ಸುರಕ್ಷಿತ ತಾಯ್ತನಕ್ಕೆ ಮುಂಜಾಗ್ರತೆಗಳು

- ಗರ್ಭಧಾರಣೆ ತಿಳಿದಾಕ್ಷಣ ಆರೋಗ್ಯ ಕೇಂದ್ರದಲ್ಲಿ ನೋಂದಾಯಿಸಿ
- ನಿಯಮಿತ ಎಎನ್‌ಸಿ ತಪಾಸಣೆಗೊಳಪಡಿಸಿ
- ವೈದ್ಯ ಸಲಹೆಯ ಮೇರೆಗೆ ಐಎಫ್‌ಎ ಮಾತ್ರೆಗಳ ಸೇವಿಸಿ
- ಸಾಕಷ್ಟು ಕಬ್ಬಿಣಾಂಶಪೂರಿತ ಪೌಷ್ಟಿಕ ಆಹಾರ ಸೇವಿಸಿ
- ಬೇಕು ಸಾಕಷ್ಟು ವಿಶ್ರಾಂತಿ
- ಶಿಶು ಹುಟ್ಟಿದ ಗಂಟೆಯೊಳಗೆ ಸ್ತನ್ಯಪಾನ (ಹಳದಿ ಕೊಲೊಸ್ಟಮ್)
- ಸ್ತನ್ಯಪಾನ, ನವಜಾತ ಆರೈಕೆ ಮತ್ತು ಲಸಿಕೆ ಬಗ್ಗೆ ಅರಿವು

SDGCC
SUSTAINABLE DEVELOPMENT GOALS COORDINATION CENTRE

ಕರ್ನಾಟಕ ಸರ್ಕಾರ

UNDP SUSTAINABLE DEVELOPMENT GOALS

ಏಪ್ರಿಲ್ 18

ವಿಶ್ವ ಪಾರಂಪರಿಕ ದಿನ

ನಮ್ಮ ಪರಂಪರೆ ನಮ್ಮ ಹೆಮ್ಮೆ!

ಇದರ ಸಂರಕ್ಷಣೆ ನಮ್ಮ ಹೊಣೆ!

ಬನ್ನಿ, ನಮ್ಮ ಪಾರಂಪರಿಕ ತಾಣವನ್ನು ಸುಂದರವಾಗಿಸೋಣ

ಪ್ರವಾಸೋದ್ಯಮವನ್ನು ಪ್ರೋತ್ಸಾಹಿಸೋಣ

ಸ್ಥಳೀಯ ಆರ್ಥಿಕತೆಗೆ ಬೆಂಬಲ ನೀಡೋಣ!

11 ಸುಸ್ಥಿರ ನಗರಗಳು ಮತ್ತು ಸಮುದಾಯಗಳು

ಏಪ್ರಿಲ್ 22

SDGCC
ಏಪ್ರಿಲ್ 22
ಭೂಮಿ ದಿನ
ಬನ್ನಿ... ಭೂಮಿಯಿಂದ ಭೂಮಿಗಾಗಿ ಕೈಜೋಡಿಸೋಣ
ಮರ ಬೆಳೆಸಿ, ಬರ ಅಳಿಸಿ,
ತಾಪ ಇಳಿಸಿ
ಕಸ ವಿಂಗಡಿಸಿ ಪ್ಲಾಸ್ಟಿಕ್ ದೂರವಿರಿಸಿ
ರಾಸಾಯನಿಕಕ್ಕೆ ಬೈ ಎನ್ನಿ,
ಸುಸ್ಥಿರ ಕೃಷಿಗೆ ಸೈ ಎನ್ನಿ
ಭುವಿಯೇ ಸತ್ಯ.... ಭುವಿಯೇ ನಿತ್ಯ....
15 LIFE ON LAND

ಮೇ 01

SDGCC
SUSTAINABLE DEVELOPMENT GOALS COORDINATION CENTRE

GOVERNMENT OF KARNATAKA

UNDP
SUSTAINABLE DEVELOPMENT GOALS

ಕಾರ್ಮಿಕರ ದಿನ

ಮೇ 1,

ಕೌಶಲ್ಯಭರಿತ ಕಾರ್ಮಿಕ, ದೇಶದ ಅಭಿವೃದ್ಧಿಗೆ ಪೂರಕ

ಕಾರ್ಮಿಕ ದೇಶ ನಿರ್ಮಾಣದ ಹರಿಕಾರ ; ದೇಶದ ಭಂಡಾರ

4 ಗುಣಮಟ್ಟದ ಶಿಕ್ಷಣ

8 ಗೌರವಯುತ ಕೆಲಸ ಮತ್ತು ಆರ್ಥಿಕ ಬೆಳವಣಿಗೆ

ಮನೆಯಲ್ಲಿರಿ ಸುರಕ್ಷಿತವಾಗಿರಿ

ಮೇ 03

SDGCC
SUSTAINABLE DEVELOPMENT GOALS COORDINATION CENTRE

GOVERNMENT OF KARNATAKA

UNDP

SUSTAINABLE DEVELOPMENT GOALS



ವಿಶ್ವ ಅಸ್ತಮಾ ದಿನ

3 ಮೇ

ಅಸ್ತಮಾವನ್ನು ಸರಿಯಾಗಿ ನಿರ್ವಹಿಸಬೇಕಾದಲ್ಲಿ ಸೂಕ್ತ ಸಮಯ ಮತ್ತು ಸರಿಯಾದ ಕ್ರಮದಲ್ಲಿ ಚಿಕಿತ್ಸೆಯನ್ನು ಪಡೆಯುವುದು ಅತ್ಯವಶ್ಯಕ

ಸಮರ್ಪಕ ರೀತಿಯಲ್ಲಿ ನಾವು ಅಸ್ತಮಾವನ್ನು ಹೇಗೆ ನಿರ್ವಹಿಸಬಹುದು?

ಪತ್ತೆ →	ತಪಾಸಣೆ →	ಚಿಕಿತ್ಸೆ
◉ ರೋಗಲಕ್ಷಣ ಮತ್ತು ಪ್ರಥಮ ಚಿಕಿತ್ಸೆ ಬಗ್ಗೆ ಅರಿಯಿರಿ	◉ ನಿಮ್ಮ ವೈದ್ಯರು ಸೂಚಿಸಿದ ಪರೀಕ್ಷೆಗಳಿಗೆ ಒಳಪಡಿ	◉ ಜೀವ ರಕ್ಷಕ ಅಸ್ತಮಾ ಸಾಧನಗಳ ಬಳಕೆ ಬಗ್ಗೆ ತಿಳಿಯಿರಿ
◉ ಸಮೀಪದ ಆರೋಗ್ಯ ಕೇಂದ್ರದಲ್ಲಿ ವೈದ್ಯರ ಸಂಪರ್ಕಿಸಿ	◉ ಪ್ರಚೋದಕಗಳು ಮತ್ತು ಉಪದ್ರವಕಾರಿಗಳ ಬಗ್ಗೆ ತಿಳಿಯಿರಿ	◉ ರೋಗಲಕ್ಷಣಗಳಿಗೆ ಸೂಚಿಸಿದ ಔಷಧಿಗಳನ್ನು ಬಳಸಿ

3 ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮ

ನೀವೂ ತಿಳಿಯಿರಿ, ಇತರರಿಗೂ ತಿಳಿಸಿಕೊಡಿ | ಚಿಕಿತ್ಸೆಗೆ ಆದ್ಯತೆ ನೀಡಿ

ಮೇ
09

“ ಅಮ್ಮನಿಗಿರಲಿ ನಿಮ್ಮ ಉಡುಗೊರೆ
ಬಾಳಿನುದ್ದಕೂ ಧೈರ್ಯದಾಸರೆ
ಪೌಷ್ಟಿಕತೆ ಬೇಕು ಆಕೆಯ ಆರೋಗ್ಯಕ್ಕೆ
ಸಿಗಲಿ ಹಕ್ಕು ಆಕೆಯ ನಿರ್ಣಯಕ್ಕೆ ”

ಅಮ್ಮಂದಿರ ದಿನ
ಮೇ 9

ಅಮ್ಮಂದಿರಿಗೆ ಶಕ್ತಿ ತುಂಬೋಣ ; ಮನೆ-ಮನದಲ್ಲಿ ಸಂತೋಷ ತುಂಬೋಣ

SDGCC
SUSTAINABLE DEVELOPMENT GOALS COORDINATION CENTRE

GOVERNMENT OF KARNATAKA

UNDP

SUSTAINABLE DEVELOPMENT GOALS

ರಾಷ್ಟ್ರೀಯ ತಂತ್ರಜ್ಞಾನ ದಿನ

11 ಮೇ

ಸುಸ್ಥಿರ ಭವಿಷ್ಯಕ್ಕಾಗಿ ವಿಜ್ಞಾನ ಮತ್ತು ತಂತ್ರಜ್ಞಾನ

- ತಂತ್ರಜ್ಞಾನದ ಕಲಿಕೆಗೆ ನಿಮ್ಮನ್ನು ಸಜ್ಜುಗೊಳಿಸಿ
- STEM ಕಾರ್ಯಕ್ರಮಗಳಿಗೆ ಮಕ್ಕಳನ್ನು ದಾಖಲಿಸಿ
- ಡಿಜಿಟಲ್ ಸೇರ್ಪಡೆ ಮೂಲಕ ಅಗತ್ಯ ನಾಗರಿಕರಿಗೆ ಬೆಂಬಲಿಸಿ
- ನವೀನ ತಂತ್ರಜ್ಞಾನಗಳ ಹಂಚಿಕೊಳ್ಳಿ
- ಡಿಜಿಟಲ್ ಸಾಕ್ಷರತೆ ಬಗ್ಗೆ ಹಿರಿಯರಿಗೆ ಕಲಿಸಿ

9 ಉದ್ಯಮ, ಆವಿಷ್ಕಾರ ಮತ್ತು ಮೂಲ ಸೌಕರ್ಯಗಳು

ಮೂಲಸೌಕರ್ಯಗಳ ಸ್ಥಿತಿಸ್ಥಾಪಕತ್ವ – ಸುಸ್ಥಿರ ಕೈಗಾರೀಕರಣ, ನಾವೀನ್ಯತೆಯ ಉತ್ತೇಜಿಸೋಣ

ಮೇ
12

SDGCC
SUSTAINABLE DEVELOPMENT GOALS COORDINATION CENTRE
GOVERNMENT OF KARNATAKA
UNDP
SUSTAINABLE DEVELOPMENT GOALS
ಅಂತಾರಾಷ್ಟ್ರೀಯ ಸಸ್ಯ ಆರೋಗ್ಯ ದಿನ
ಸಸ್ಯಗಳ ರಕ್ಷಣೆಯಿಂದ ಜೀವ ರಕ್ಷಣೆ
15
2
12
13
12 ಮೇ
ನಿಮಗಿದು ತಿಳಿದಿದೆಯೇ?
ಸಸ್ಯಗಳ ಮೇಲೆ ಅವಲಂಬಿಸಿದೆ ನಮ್ಮ ಆರೋಗ್ಯ
ಸಸ್ಯಗಳಿಗಳಿಂದ ಉತ್ಪತ್ತಿಯಾಗಿದೆ 80% ನಾವು ಸೇವಿಸುವ ಆಹಾರ
ಸಸ್ಯಗಳು ಒದಗಿಸುತ್ತವೆ 98% ನಾವು ಸೇವಿಸುವ ಆಮ್ಲಜನಕ
ಸಸ್ಯಗಳ ಆರೋಗ್ಯದ ರಕ್ಷಣೆ ಹೇಗೆ ಸಾಧ್ಯ?
ಮಣ್ಣಿನ ಆರೋಗ್ಯ ಪರೀಕ್ಷೆ
ಜವಾಬ್ದಾರಿಯುತ ಪೂರೈಕೆದಾರರಿಂದ ಸಸ್ಯಗಳ ಖರೀದಿ
ಸಸ್ಯ ಕೀಟಗಳ ಅಪಾಯ ತಗ್ಗಿಸಿ
ಸುಸ್ಥಿರ ಕೀಟ ಮತ್ತು ಕೀಟನಾಶಕ ನಿರ್ವಹಣೆ ನಿಮ್ಮದಾಗಲಿ
ಹಸಿ ತ್ಯಾಜ್ಯಗಳಿಂದಾದ ಗೊಬ್ಬರ ಬಳಸಿ
ಆರೋಗ್ಯಕರ ಸಸ್ಯಗಳಿಂದಾಗುವುದು ಹಸಿವುಮುಕ್ತತೆ, ಬಡತನ ಇಳಿಕೆ,
ಪರಿಸರ ರಕ್ಷಣೆ ಮತ್ತು ಆರ್ಥಿಕಾಭಿವೃದ್ಧಿ

ಮೇ 15


SDGCC
SUSTAINABLE DEVELOPMENT GOALS COORDINATION CENTRE
GOVERNMENT OF KARNATAKA
UNDP
SUSTAINABLE DEVELOPMENT GOALS
ಅಂತಾರಾಷ್ಟ್ರೀಯ
ಕೌಟುಂಬಿಕ ದಿನ
15 ಮೇ
3 ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮ
ಆಧುನಿಕತೆ ಮಧ್ಯೆ ಕುಟುಂಬಗಳು ಮತ್ತು ನಗರೀಕರಣ
11 ಸುಸ್ಥಿರ ನಗರಗಳು ಮತ್ತು ಸಮುದಾಯಗಳು
ಸುಖೀ-ಆರೋಗ್ಯಕರ ಕುಟುಂಬವಾಗಿಸಲು ಇಲ್ಲಿದೆ ಸರಳ ವಿಧಾನ
ಪ್ರತಿದಿನ ಒಟ್ಟಿಗೆ ಕುಳಿತು ಊಟ ಮಾಡಿ
ಕುಟುಂಬದ ಸಮಯದಲ್ಲಿ ಮೊಬೈಲ್- ಟಿವಿಗಳಿಂದ ದೂರವಿರಿ
ಒಟ್ಟಾಗಿ ಸೇರಿ ಮನರಂಜನೆಯಲ್ಲಿ ಭಾಗವಹಿಸಿ
ಮುಕ್ತ ಚರ್ಚೆ ವಿಮರ್ಶೆಗಳಿಗಿರಲಿ ಕುಟುಂಬದಲಿ
ಭಾವನೆಗಳ ಹಂಚಿಕೊಳ್ಳಿ, ಸಣ್ಣ ಗೆಲುವನ್ನೂ ಸಂಭ್ರಮಿಸಿ
ದಿನಚರಿ ತಪ್ಪಿಸದಿರಿ, ವಿಶ್ರಾಂತಿಗೆ ಆದ್ಯತೆ ನೀಡಿ
ಆರೋಗ್ಯಕರ ಕುಟುಂಬಕ್ಕೆ ಸುಸ್ಥಿರ ಜೀವನಶೈಲಿಯೇ ಭರವಸೆ – ಆಸರೆ

ಮೇ 20


SDGCC
SUSTAINABLE DEVELOPMENT GOALS COORDINATION CENTRE
GOVERNMENT OF KARNATAKA
UNDP
SUSTAINABLE DEVELOPMENT GOALS
ವಿಶ್ವ ಜೇನು ದಿನ
20 ಮೇ
ಸ್ಥಳೀಯ ರೈತರಿಂದ ಜೇನು ಉತ್ಪನ್ನ ಖರೀದಿಸಿ
ನಿಮ್ಮ ಕೈತೋಟದಲ್ಲಿ ಮಕರಂದದ ಹೂವುಗಳ ಬೆಳೆಸಿ
ಸ್ಥಳೀಯ ಹೂಬಿಡುವ ವಿವಿಧ ಸಸ್ಯಗಳ ಬೆಳೆಸಿ
ನಿಮ್ಮ ವ್ಯಾಪ್ತಿಯಲಿ ಪರಾಗಸ್ಪರ್ಶ ಉದ್ಯಾನವನ ಸ್ಥಾಪಿಸಿ
ಜೇನುನೊಣಗಳಿಗೆ ಹಾನಿ ಮಾಡುವ ಕೀಟನಾಶಕಗಳ ತಪ್ಪಿಸಿ
15 ಭೂಮಿ ಮೇಲಿನ ಜೀವರಾಶಿ
ಜೇನುನೊಣ ಮತ್ತು ಅವುಗಳ ಆವಾಸಸ್ಥಾನ ಉಳಿಸಿ - ಪರಿಸರ ವ್ಯವಸ್ಥೆಯ ರಕ್ಷಿಸಿ

ಮೇ 31


SDGCC
SUSTAINABLE DEVELOPMENT GOALS COORDINATION CENTRE
GOVERNMENT OF KARNATAKA
UNDP
SUSTAINABLE DEVELOPMENT GOALS
ತಂಬಾಕು ಕ್ಯಾನ್ಸರ್‌ಗೆ ಆಹ್ವಾನ
ಸಾವಿಗೆ ಕೊಟ್ಟಂತೆ ಆಮಂತ್ರಣ
ಸಿಗರೇಟ್, ಗುಟ್ಕಾ ಅಂಟಿದ ಚಟ
ಜೀವದ ಜೊತೆ ಆಡುತ್ತೆ ಚೆಲ್ಲಾಟ
ವಿಶ್ವ ತಂಬಾಕು
ರಹಿತ ದಿನ
ಮೇ 31
ತಂಬಾಕು ಬಿಡಿ;
"ಜೀವ"(ನ)ಕ್ಕೊಂದು ಅರ್ಥ ಕೊಡಿ
3 ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮ

SDGCC
SUSTAINABLE DEVELOPMENT GOALS COORDINATION CENTRE
GOVERNMENT OF KARNATAKA
UNDP
SUSTAINABLE DEVELOPMENT GOALS
ವಿಶ್ವ
ಪರಿಸರ
ದಿನ
ಜೂನ್ 5
ಬೆಳೆಸಿ ಮರಗಳನು
ಹಸಿರುಗೊಳಿಸಿ ನಗರಗಳನು
ಬದಲಿಸಿ
ಆಹಾರ
ಕ್ರಮವನು
ಸ್ವಚ್ಛಗೊಳಿಸಿ
ನದಿ
ಕರಾವಳಿಗಳನು
ನಿರ್ಮಿಸಿ ಉದ್ಯಾನಗಳನು
ಹಸಿರು ಬೆಳೆಸೋಣ,
ಉಸಿರು ಪಡೆಯೋಣ
13 ಹವಾಮಾನದ ಬಗ್ಗೆ ಕ್ರಮ
11 ಸುಸ್ಥಿರ ನಗರಗಳು ಮತ್ತು ಸಮುದಾಯಗಳು

ಜೂನ್
08


SDGCC
SUSTAINABLE DEVELOPMENT GOALS COORDINATION CENTRE
GOVERNMENT OF KARNATAKA
U N D P
SUSTAINABLE DEVELOPMENT GOALS
ವಿಶ್ವ
ಸಾಗರ ದಿನ
ಜೂನ್ 8,
ಜೀವ-ಜೀವನೋಪಾಯ
ಪೋಷಿಸಿ
ಸಮುದ್ರ- ಸಮುದ್ರದ
ಸಂಪನ್ಮೂಲವ
ಸಂರಕ್ಷಿಸಿ
ಸಾಗರ ಬಳಸಿ
ಶೋಷಣೆ ನಿಲ್ಲಿಸಿ
14 ಜಲದ ಜೀವರಾಶಿ
2 ಹಸಿವು ಮುಕ್ತ
8 ಗೌರವಯುತ ಕೆಲಸ ಮತ್ತು ಆರ್ಥಿಕ ಬೆಳವಣಿಗೆ

ಜೂನ್
12

SDGCC
SUSTAINABLE DEVELOPMENT GOALS COORDINATION CENTRE
GOVERNMENT OF KARNATAKA
UNDP
SUSTAINABLE DEVELOPMENT GOALS
ವಿಶ್ವ ಬಾಲ ಕಾರ್ಮಿಕ ವಿರೋಧಿ ದಿನ
12 ಜೂನ್
ಇಂದೇ ಕಂಕಣಬದ್ಧರಾಗಿ:
ಬಾಲ ಕಾರ್ಮಿಕ ಪದ್ಧತಿ ಕೊನೆಗೊಳಿಸಿ!
ತಳ್ಳದಿರಿ ಮಕ್ಕಳನು
ದುಡಿಮೆಗೆ; ಸೇರಿಸಿ
ಅವರನು ಶಾಲೆಗೆ
24X7 ಮಕ್ಕಳ ಸಹಾಯವಾಣಿ
1098
4 ಗುಣಮಟ್ಟದ ಶಿಕ್ಷಣ
10 ಅಸಮಾನತೆಗಳ ಇಳಿಕೆ
8 ಗೌರವಯುತ ಕೆಲಸ ಮತ್ತು ಆರ್ಥಿಕ ಬೆಳವಣಿಗೆ

ಜೂನ್ 21

ವಿಶ್ವ ರಕ್ತದಾನಿಗಳ ದಿನ



ಜೂನ್ 21

ಅಂತಾರಾಷ್ಟ್ರೀಯ ಯೋಗ ದಿನ

ಜುಲೈ 15

SDGCC
SUSTAINABLE DEVELOPMENT GOALS COORDINATION CENTRE
GOVERNMENT OF KARNATAKA
UNDP
SUSTAINABLE DEVELOPMENT GOALS
ವಿಶ್ವ
ಯುವ
ಕೌಶಲ್ಯ
ದಿನ
ಜುಲೈ 15,
2
3
2022ರ ವಿಶ್ವ ಕೌಶಲ್ಯ ಸ್ಪರ್ಧೆಯಲ್ಲಿ ಭಾರತ
ಹೆಮ್ಮೆಪಡುವಂತೆ ಮಾಡಿ
worldskills Shanghai2022
ಸಾಂಕ್ರಾಮಿಕ ನಂತರದ ಯುವ
ಕೌಶಲ್ಯಗಳ ಮರುಸ್ಥಾಪಿಸೋಣ
4 ಗುಣಮಟ್ಟದ ಶಿಕ್ಷಣ
8
ಯುವಜನತೆಯ ಸ್ಥಿತಿಸ್ಥಾಪಕತ್ವ,
ಸೃಜನಶೀಲತೆಯನ್ನು ಬೆಂಬಲಿಸೋಣ
ಹೆಚ್ಚಿನ ಮಾಹಿತಿಗಾಗಿ
https://www.kaushalkar.com
Karnatakaskills@kaushalkar.com
@Skill_Karnataka

ಜುಲೈ 29


SDGCC
SUSTAINABLE DEVELOPMENT GOALS COORDINATION CENTRE
GOVERNMENT OF KARNATAKA
U N D P
SUSTAINABLE DEVELOPMENT GOALS
ಕ್ಯಾಮೆರಾದಲ್ಲಷ್ಟೇ
ಸೆರೆಯಾಗಲಿ
ಹುಲಿ ಹತ್ಯೆ
ಕೊನೆಯಾಗಲಿ
ಹುಲಿಗಳ ರಕ್ಷಣೆ ನಮ್ಮ ಹೊಣೆ
ಹುಲಿ ಸಂತತಿ ರಕ್ಷಿಸಿ, ರಾಷ್ಟ್ರ ಹೆಮ್ಮೆಯ ಉಳಿಸಿ
ವಿಶ್ವ
ಹುಲಿ ದಿನ
ಜುಲೈ 29,
15 ಭೂಮಿ ಮೇಲಿನ ಜೀವರಾಶಿ

ಜುಲೈ 30

SDGCC
SUSTAINABLE DEVELOPMENT GOALS COORDINATION CENTRE

GOVERNMENT OF KARNATAKA

UN DP
SUSTAINABLE DEVELOPMENT GOALS

16 ಶಾಂತಿ, ನ್ಯಾಯ ಮತ್ತು ಸದೃಢ ಸಂಸ್ಥೆಗಳು

ವಿಶ್ವ ಮಾನವ ಕಳ್ಳಸಾಗಣೆ ವಿರೋಧಿ ದಿನ

30 ಜುಲೈ

5 ಲಿಂಗ ಸಮಾನತೆ

ಅಂತರ್ಜಾಲ ಬಳಕೆದಾರರೇ ಎಚ್ಚರ, ಮಾನವ ಕಳ್ಳಸಾಗಾಣಿಕೆ ಜಾಲದಲ್ಲಿ ನಿಮ್ಮನ್ನು ಬೀಳಿಸುವವರಿದ್ದಾರೆ. ಅಂತರ್ಜಾಲದಲ್ಲಿ ನಿಮ್ಮ ಪ್ರತಿ ಚಲನೆ ಮೇಲೆ ನಿಗಾ, ಪರಿವೀಕ್ಷಣೆ ಮತ್ತು ಆಮಿಷ ಒಡ್ಡುವ ತಂತ್ರಗಳು ನಡೆಯಬಹುದು.

ನಿಮ್ಮ – ಪ್ರೀತಿಪಾತ್ರರ ರಕ್ಷಣೆಗೆ ಅಂತರ್ಜಾಲ ಸುರಕ್ಷತೆಯನ್ನು ಅಳವಡಿಸಿಕೊಳ್ಳಿ

- ನಿಮ್ಮ ಸಾಮಾಜಿಕ ಜಾಲತಾಣ ಖಾತೆಗಳನ್ನು ಪ್ರೈವೆಸಿಗೆ ಅಳವಡಿಸಿ
- ನಿಮಗೆ ತಿಳಿದಿರುವವರಿಂದ ಮಾತ್ರವೇ ವಿನಂತಿಗಳ ಸ್ವೀಕರಿಸಿ
- ನಿಮ್ಮ ವೈಯಕ್ತಿಕ ಮಾಹಿತಿಯನ್ನು ಹಂಚಿಕೊಳ್ಳಬೇಡಿ
- ನಿಮ್ಮ ಪ್ರಯಾಣದ ವಿವರಗಳನ್ನು ಜಾಲತಾಣದಲ್ಲಿ ಹಂಚಿಕೊಳ್ಳಬೇಡಿ
- ನಿಮ್ಮ ಲೈವ್ ಲೊಕೇಶನ್ ಹಂಚಿಕೊಳ್ಳುವಾಗ ಜಾಗ್ರತೆವಹಿಸಿ
- ಅನುಮಾನಾಸ್ಪದ ಇಮೇಲ್‌ಗಳಿಗೆ ಪ್ರತಿಕ್ರಿಯಿಸಬೇಡಿ
- ಮಾನವ ಕಳ್ಳಸಾಗಣೆ ಬಗೆಗಿನ ಎಚ್ಚರಿಕೆಯ ಚಿಹ್ನೆಗಳ ಬಗ್ಗೆ ಅರಿಯಿರಿ
- ಯಾರೇ ಕಿರುಕುಳ ನೀಡುತ್ತಿದ್ದರೂ ಅವರ ಖಾತೆಯನ್ನು ನಿರ್ಬಂಧಿಸಿ ಅಥವಾ ವರದಿ ಮಾಡಿ

ನೀವು ಅಪಾಯದಲ್ಲಿದ್ದೀರಿ ಎಂದು ನಿಮಗನ್ನಿಸಿದರೆ ಎಚ್ಚರವಹಿಸಿ ಇಲ್ಲವೇ ಸಹಾಯ ಪಡೆಯಲು ಹಿಂಜರಿಯಬೇಡಿ

☎ ಈ ಸಹಾಯವಾಣಿಗಳ ನೆನಪಿಟ್ಟುಕೊಳ್ಳಿ

ಮಕ್ಕಳು - 1098 / ಮಹಿಳೆಯರು - 181 / ತುರ್ತು ಪರಿಸ್ಥಿತಿ - 112 / ಸೈಬರ್ ಕ್ರೈಂ - 1930

ಆಗಸ್ಟ್ 12

SDGCC
SUSTAINABLE DEVELOPMENT GOALS COORDINATION CENTRE
GOVERNMENT OF KARNATAKA
UNDP
SUSTAINABLE DEVELOPMENT GOALS
ಅಂತಾರಾಷ್ಟ್ರೀಯ
ಯುವ
ದಿನ
ಆಗಸ್ಟ್ 12
ಆಹಾರ ವ್ಯವಸ್ಥೆ ಬದಲಾಗಲಿ;
ಮಾನವ-ಗ್ರಹಗಳ ಆರೋಗ್ಯಕ್ಕೆ ಯುವ ನಾವೀನ್ಯತೆ ಬಳಕೆಯಾಗಲಿ
2 ಹಸಿವು ಮುಕ್ತ
3 ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮ
15 ಭೂಮಿ ಮೇಲಿನ ಜೀವರಾಶಿ
ಜೀವ ವೈವಿಧ್ಯತೆಯ ಸಂಯೋಜಿಸಿ;
ಗ್ರಹವನ್ನು ಪುನಃಸ್ಥಾಪಿಸಿ, ಜೀವ-ಜೀವನ ರಕ್ಷಿಸಿ

SDGCC
SUSTAINABLE DEVELOPMENT GOALS COORDINATION CENTRE
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
GOVERNMENT OF KARNATAKA
ನಿಮ್ಮ ಸಹಾಯಕ್ಕೆ ಯುವ
ಸಹಾಯವಾಣಿ
ಯಾವುದೋ ಸಮಸ್ಯೆಯಿಂದ ನೀವು ಕಂಗೆಟ್ಟಿದ್ದೀರಾ?
ದಾರಿ ಕಾಣದೇ ನೀವು ಹತಾಶರಾಗಿದ್ದೀರಾ?
ಮಾರ್ಗದರ್ಶನದ ಅಗತ್ಯವಿದೆಯೇ?
ನೀವು ಕ್ರೀಡೆಗಳಲ್ಲಿ ನೋಂದಾಯಿಸಬೇಕೇ?
ವೃತ್ತಿ ಮಾರ್ಗದರ್ಶನ ಬೇಕೇ?
ಯುವಜನ ಕಾರ್ಯಕ್ರಮಗಳು ಮತ್ತು ಯೋಜನೆಗಳ ಬಗ್ಗೆ ತಿಳಿಯಬೇಕೇ?
ನೀವು ಕ್ರೀಡಾ ಸಾಧಕರಾಗಿದ್ದು, ವಿದ್ಯಾರ್ಥಿವೇತನ ಅಥವಾ ಹಾಸ್ಟೆಲ್ ಅಗತ್ಯವಿದೆಯೇ?
ಇನ್ನೇಕೆ ವಿಳಂಬ...?
155265
ಸಂಖ್ಯೆಗೆ ಕರೆ ಮಾಡಿ
YOUTH HELPLINE
ನಮ್ಮ ಸೇವೆಗಳು ಸಂಪೂರ್ಣ ಉಚಿತ
ಸಮಯ : ಬೆಳಗ್ಗೆ 9.00 ರಿಂದ ಸಂಜೆ 5.00

ಆಗಸ್ಟ್ 19

SDGCC
SUSTAINABLE DEVELOPMENT GOALS COORDINATION CENTRE
GOVERNMENT OF KARNATAKA
UNDP
SUSTAINABLE DEVELOPMENT GOALS
ಅಂತಾರಾಷ್ಟ್ರೀಯ ಮಾನವೀಯ ದಿನ
ಆಗಸ್ಟ್ 19
ಹವಾಮಾನ ಬಿಕ್ಕಟ್ಟಿನ ವಿರುದ್ಧದ ಹೋರಾಟ
ಎಲ್ಲರ ಸಹಿತ ಶುರುವಾಗಲಿ ಒಗ್ಗಟ್ಟಿನ ಓಟ

ಸೆಪ್ಟೆಂಬರ್ 1-7



SDGCC
SUSTAINABLE DEVELOPMENT GOALS COORDINATION CENTRE
GOVERNMENT OF KARNATAKA
UNDP
SUSTAINABLE DEVELOPMENT GOALS
ರಾಷ್ಟ್ರೀಯ ಪೌಷ್ಟಿಕಾಂಶ ಸಪ್ತಾಹ
1 ರಿಂದ 7 ಸೆಪ್ಟೆಂಬರ್
ತಾಯಿ-ಮಗುವಿಗೆ ಸಿಗಲಿ ಪೌಷ್ಟಿಕ ಆಹಾರ
ಬಲಿಷ್ಠ ಭಾರತಕ್ಕೆ ಇದುವೇ ಪರಿಹಾರ
2 ಹಸಿವು ಮುಕ್ತ
3 ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮ

ನಮ್ಮ ಆಹಾರ ನಮ್ಮ ಔಷಧ

ನಮ್ಮ ಆಹಾರ ನಮ್ಮ ಔಷಧ

ನಮ್ಮ ಆಹಾರ ನಮ್ಮ ಔಷಧ

ನಿಮ್ಮ ಊಟ ನಿಮ್ಮ ಶಕ್ತಿ
ನಮ್ಮ ಆಹಾರ ನಮ್ಮ ಔಷಧ

ಸೆಪ್ಟೆಂಬರ್ 05

SDGCC
SUSTAINABLE DEVELOPMENT GOALS COORDINATION CENTRE
GOVERNMENT OF KARNATAKA
UN DP
SUSTAINABLE DEVELOPMENT GOALS
ಶಿಕ್ಷಕರ ದಿನಾಚರಣೆಯ ಶುಭಾಶಯಗಳು
5, ಸೆಪ್ಟೆಂಬರ್
ಮತ್ತೆ ಶುರುವಾಗಲಿ ಶಿಕ್ಷಣ ಯಾನ
ಅಕ್ಷರ ದಾಸೋಹಿಗೆ ಕೋಟಿ ನಮನ
4 ಗುಣಮಟ್ಟದ ಶಿಕ್ಷಣ

ಸೆಪ್ಟೆಂಬರ್ 08

SDGCC
SUSTAINABLE DEVELOPMENT GOALS COORDINATION CENTRE
GOVERNMENT OF KARNATAKA
UNDP
SUSTAINABLE DEVELOPMENT GOALS
ಅಂತಾರಾಷ್ಟ್ರೀಯ
ಸಾಕ್ಷರತಾ ದಿನ
8, ಸೆಪ್ಟೆಂಬರ್
4 ಗುಣಮಟ್ಟದ ಶಿಕ್ಷಣ
ಸಾಂಕ್ರಾಮಿಕ ರೋಗ ಭೀತಿಯ ಬಿಡೋಣ
ಸಾರ್ವತ್ರಿಕ ಅಕ್ಷರ ಪ್ರೀತಿಯ ಮೆರೆಯೋಣ – ಸಾಕ್ಷರರಾಗೋಣ

ಸೆಪ್ಟೆಂಬರ್ 09

SDGCC
SUSTAINABLE DEVELOPMENT GOALS COORDINATION CENTRE
GOVERNMENT OF KARNATAKA
UNDP
SUSTAINABLE DEVELOPMENT GOALS
ವಿಶ್ವ
ಇ ವಾಹನ
ದಿನ
9, ಸೆಪ್ಟೆಂಬರ್
ನನ್ನ ಬಳಕೆ, ನನ್ನ ವ್ಯಾಪಾರ ಇ-ವಾಹನ
ಮಲಿನಮುಕ್ತ ನಾಡಿಗೆ ಇದುವೇ ಭೂಷಣ

ಸೆಪ್ಟೆಂಬರ್ 15

SDGCC
SUSTAINABLE DEVELOPMENT GOALS COORDINATION CENTRE
GOVERNMENT OF KARNATAKA
UNDP
SUSTAINABLE DEVELOPMENT GOALS
ಅಂತಾರಾಷ್ಟ್ರೀಯ
ಪ್ರಜಾಪ್ರಭುತ್ವ ದಿನ
15, ಸೆಪ್ಟೆಂಬರ್
ಮತ ಚಲಾಯಿಸಿ
10 ಅಸಮಾನತೆಗಳ ಇಳಿಕೆ
ಪ್ರಜಾಸತ್ತಾತ್ಮಕತೆ ಎತ್ತಿ ಹಿಡಿಯೋಣ
ಎಲ್ಲೆಡೆ ಪ್ರಜಾಪ್ರಭುತ್ವವ ಗೆಲ್ಲಿಸೋಣ

ಸೆಪ್ಟೆಂಬರ್ 16

SDGCC
SUSTAINABLE DEVELOPMENT GOALS COORDINATION CENTRE
GOVERNMENT OF KARNATAKA
UNDP
SUSTAINABLE DEVELOPMENT GOALS
ವಿಶ್ವ ಓಝೋನ್ ದಿನ
16, ಸೆಪ್ಟೆಂಬರ್ 2021
ಓಝೋನ್ ರಕ್ಷಿಸಿ, ಜೀವ-ಜೀವನ ಉಳಿಸಿ
13 ಹವಾಮಾನದ ಬಗ್ಗೆ ಕ್ರಮ
14 ಜಲದ ಜೀವರಾಶಿ

ಸೆಪ್ಟೆಂಬರ್ 18


SDGCC
SUSTAINABLE DEVELOPMENT GOALS COORDINATION CENTRE
GOVERNMENT OF KARNATAKA
U N D P
SUSTAINABLE DEVELOPMENT GOALS
ವಿಶ್ವ ಬಿದಿರು ದಿನ
18, ಸೆಪ್ಟೆಂಬರ್
15 ಭೂಮಿ ಮೇಲಿನ ಜೀವರಾಶಿ
ಹೆಚ್ಚೆಚ್ಚು ಬಿದಿರು ನೆಡಿ;
ಬಿದಿರಿನ ಉದ್ದಿಮೆಗೆ ಉತ್ತೇಜನ ಕೊಡಿ
9 ಉದ್ಯಮ, ಆವಿಷ್ಕಾರ ಮತ್ತು ಮೂಲ ಸೌಕರ್ಯಗಳು

ಸೆಪ್ಟೆಂಬರ್ 18

SDGCC
GOVERNMENT OF KARNATAKA
UNDP
SUSTAINABLE DEVELOPMENT GOALS
ಅಂತಾರಾಷ್ಟ್ರೀಯ
ಸಮಾನ ವೇತನ ದಿನ
18, ಸೆಪ್ಟೆಂಬರ್
ಸಮಾನ ಮೌಲ್ಯದ ಕೆಲಸಕ್ಕೆ ಸಿಗಲಿ ಸಮಾನ ವೇತನ
8 ಗೌರವಯುತ ಕೆಲಸ ಮತ್ತು ಆರ್ಥಿಕ ಬೆಳವಣಿಗೆ
5 ಲಿಂಗ ಸಮಾನತೆ
10 ಅಸಮಾನತೆಗಳ ಇಳಿಕೆ
1 ಬಡತನದ ನಿರ್ಮೂಲನೆ

ಸೆಪ್ಟೆಂಬರ್
21

SDGCC
SUSTAINABLE DEVELOPMENT GOALS COORDINATION CENTRE

GOVERNMENT OF KARNATAKA

UNDP

SUSTAINABLE DEVELOPMENT GOALS

ವಿಶ್ವ
ಅಲ್‌ಝೈಮರ್
ದಿನ

21, ಸೆಪ್ಟೆಂಬರ್

3 ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮ

ಪೌಷ್ಟಿಕ ಆಹಾರ ಸೇವಿಸಿ, ಕ್ರಿಯಾಶೀಲತೆ ಹೆಚ್ಚಿಸಿ, ಮರೆವಿನ ಕಾಯಿಲೆ ನಿಯಂತ್ರಿಸಿ

ಸೆಪ್ಟೆಂಬರ್ 21

SDGCC
SUSTAINABLE DEVELOPMENT GOALS COORDINATION CENTRE
GOVERNMENT OF KARNATAKA
UNDP
SUSTAINABLE DEVELOPMENT GOALS
21, ಸೆಪ್ಟೆಂಬರ್
ಅಂತಾರಾಷ್ಟ್ರೀಯ
ಶಾಂತಿ ದಿನ
ಎಲ್ಲರನು ಸಮಾನವಾಗಿ ಕಾಣೋಣ ;
ನ್ಯಾಯಸಮ್ಮತ-ಸುಸ್ಥಿರ ಜಗತ್ತು ಕಟ್ಟೋಣ
16 ಶಾಂತಿ, ನ್ಯಾಯ ಮತ್ತು ಸದೃಢ ಸಂಸ್ಥೆಗಳು

ಸೆಪ್ಟೆಂಬರ್ 25

SDGCC
SUSTAINABLE DEVELOPMENT GOALS COORDINATION CENTRE
GOVERNMENT OF KARNATAKA
UNDP
SUSTAINABLE DEVELOPMENT GOALS
ಅಂತ್ಯೋದಯ ದಿವಸ
25, ಸೆಪ್ಟೆಂಬರ್
ಬಡತನ ಅಂತ್ಯವಾಗಲಿ,
ಹಸಿವು ನೀಗಲಿ
1 ಬಡತನದ ನಿರ್ಮೂಲನೆ
2 ಹಸಿವು ಮುಕ್ತ

ಸೆಪ್ಟೆಂಬರ್ 26

SDGCC
SUSTAINABLE DEVELOPMENT GOALS COORDINATION CENTRE
GOVERNMENT OF KARNATAKA
UNDP
SUSTAINABLE DEVELOPMENT GOALS
ವಿಶ್ವ
ಸಂತಾನ ನಿಯಂತ್ರಣ
ದಿನ
SEPTEMBER
26, ಸೆಪ್ಟೆಂಬರ್
ಸಂತಾನ ನಿಯಂತ್ರಣ ಮಾರ್ಗ ಆರಿಸಿಕೊಳ್ಳಿ,
ಕೌಟುಂಬಿಕ ಆರೋಗ್ಯ ಕಾಪಾಡಿಕೊಳ್ಳಿ
3 ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮ
ಹೆಚ್ಚಿನ ಮಾಹಿತಿಗೆ ನಿಮ್ಮ ವೈದ್ಯರನ್ನು
ಅಥವಾ ಸ್ಥಳೀಯ ಪ್ರಾಥಮಿಕ
ಆರೋಗ್ಯ ಕೇಂದ್ರವನ್ನು ಸಂಪರ್ಕಿಸಿ
https://hfwcom.karnataka.gov.in

ಸೆಪ್ಟೆಂಬರ್ 27

SDGCC
SUSTAINABLE DEVELOPMENT GOALS COORDINATION CENTRE
GOVERNMENT OF KARNATAKA
UNDP
SUSTAINABLE DEVELOPMENT GOALS
ವಿಶ್ವ ಪ್ರವಾಸೋದ್ಯಮ ದಿನ
27, ಸೆಪ್ಟೆಂಬರ್
ಸ್ಥಳೀಯ ಪ್ರವಾಸೋದ್ಯಮ ಬೆಳೆಯಲಿ
ಸ್ಥಳೀಯ ಉದ್ಯೋಗ-ಸಂಸ್ಕೃತಿ ಬೆಳಗಲಿ
11 ಸುಸ್ಥಿರ ನಗರಗಳು ಮತ್ತು ಸಮುದಾಯಗಳು
8 ಗೌರವಯುತ ಕೆಲಸ ಮತ್ತು ಆರ್ಥಿಕ ಬೆಳವಣಿಗೆ
ಲಸಿಕೆ ಹಾಕಿಸಿಕೊಳ್ಳಿ,
ಸುರಕ್ಷಿತವಾಗಿ ಪ್ರಯಾಣಿಸಿ

ಸೆಪ್ಟೆಂಬರ್ 29

SDGCC
SUSTAINABLE DEVELOPMENT GOALS COORDINATION CENTRE
GOVERNMENT OF KARNATAKA
U N D P
SUSTAINABLE DEVELOPMENT GOALS
ಅಂತಾರಾಷ್ಟ್ರೀಯ ಆಹಾರ ನಷ್ಟ, ವ್ಯರ್ಥದ ಜಾಗೃತಿ ದಿನ
12 ಜವಾಬ್ದಾರಿಯುತ ಬಳಕೆ ಮತ್ತು ಉತ್ಪಾದನೆ
ಗುರಿ 12.3
29, ಸೆಪ್ಟೆಂಬರ್
1 ಬಡತನದ ನಿರ್ಮೂಲನೆ
2 ಹಸಿವು ಮುಕ್ತ
ಚೆಲ್ಲದಿರಿ ಆಹಾರ,
ಹಸಿವಿಗಿದು ಪರಿಹಾರ

ಅಕ್ಟೋಬರ್ 01

SDGCC
SUSTAINABLE DEVELOPMENT GOALS COORDINATION CENTRE

GOVERNMENT OF KARNATAKA

UNDP

SUSTAINABLE DEVELOPMENT GOALS

ಅಂತಾರಾಷ್ಟ್ರೀಯ
ಹಿರಿಯ ನಾಗರಿಕರ ದಿನ

01, ಅಕ್ಟೋಬರ್

ಎಲ್ಲ ವಯೋಮಾನಕ್ಕೆ ಸಿಗಲಿ ಡಿಜಿಟಲ್ ಸಮತೆಯ ಸಮ್ಮಾನ

4 ಗುಣಮಟ್ಟದ ಶಿಕ್ಷಣ

10 ಅಸಮಾನತೆಗಳ ಇಳಿಕೆ

ಡಿಜಿಟಲ್ ಪ್ರಪಂಚದಲ್ಲಿ ಹಿರಿಯರಿಗೆ ಸಿಗಲಿ ಖಾಸಗಿತನ ಮತ್ತು ಸುರಕ್ಷೆ

ಅಕ್ಟೋಬರ್ 10

SDGCC
SUSTAINABLE DEVELOPMENT GOALS COORDINATION CENTRE

GOVERNMENT OF KARNATAKA

UNDP

SUSTAINABLE DEVELOPMENT GOALS



ವಿಶ್ವ ಮಾನಸಿಕ ಆರೋಗ್ಯ ದಿನ

ಅಸಮಾನ ಜಗತ್ತಿನೊಳಗೆ ಮಾನಸಿಕ ಆರೋಗ್ಯ

10, ಅಕ್ಟೋಬರ್

3 ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮ

ಸಾಂತ್ವನ ಸಿಗಲಿ; ಮನೋಧೈರ್ಯ ಬೆಳೆಯಲಿ;
ಬದುಕಿಗೆ ಸಿಗಲಿ ಆಡಿಪಾಯ
ಪ್ರತಿಯೊಬ್ಬರಿಗೂ ಬೇಕು ಆದಾಯ ಮತ್ತು ಜೀವನೋಪಾಯ

1 ಬಡತನದ ನಿರ್ಮೂಲನೆ

2 ಹಸಿವು ಮುಕ್ತ

ಹೆಚ್ಚಿನ ಮಾಹಿತಿಗೆ

https://skillconnect.kaushalkar.com/
https://santhe.kaushalkar.com/register

ಅಕ್ಟೋಬರ್ 11

ನನ್ನ ಧ್ವನಿ, ನಮ್ಮ ಸಮಾನ ಭವಿಷ್ಯ

ಅಕ್ಟೋಬರ್ 17

SDGCC
SUSTAINABLE DEVELOPMENT GOALS COORDINATION CENTRE

GOVERNMENT OF KARNATAKA

UNDP

SUSTAINABLE DEVELOPMENT GOALS

ಅಂತಾರಾಷ್ಟ್ರೀಯ
ಬಡತನ ನಿರ್ಮೂಲನೆ ದಿನ

17, ಅಕ್ಟೋಬರ್

ಬಡವರನ್ನು ಗುರುತಿಸೋಣ
ಯೋಜನೆಗಳ ತಿಳಿಸೋಣ

1 ಬಡತನದ ನಿರ್ಮೂಲನೆ

ಯಾರನ್ನೂ ಹಿಂದಕ್ಕೆ ಬಿಡದಿರೋಣ
ಬಡತನ-ಹಸಿವು ಮುಕ್ತಗೊಳಿಸೋಣ

ಅಕ್ಟೋಬರ್ 30

SDGCC
SUSTAINABLE DEVELOPMENT GOALS COORDINATION CENTRE
GOVERNMENT OF KARNATAKA
UN DP
SUSTAINABLE DEVELOPMENT GOALS
ವಿಶ್ವ
ಮಿತವ್ಯಯ ದಿನ
30, ಅಕ್ಟೋಬರ್
ಎಲ್ಲರಿಗೂ ಉಳಿತಾಯದ ಮಹತ್ವ ತಿಳಿಸೋಣ
ಹನಿ ಹನಿ ಸೇರಿ ಸಾಗರ, ಸಣ್ಣ ಉಳಿತಾಯ ಜೀವನಕೆ ಆಧಾರ
ಉಳಿತಾಯ ಮಾಡೋಣ
ಖರ್ಚನ್ನು ನಿಯಂತ್ರಿಸೋಣ
ಅಗತ್ಯವಾದುದನ್ನೇ ಖರೀದಿಸೋಣ
ಹೂಡಿಕೆ ಮಾಡೋಣ

ಅಕ್ಟೋಬರ್ 31

SDGCC
SUSTAINABLE DEVELOPMENT GOALS COORDINATION CENTRE
GOVERNMENT OF KARNATAKA
U N D P
SUSTAINABLE DEVELOPMENT GOALS
ವಿಶ್ವ ನಗರಗಳ ದಿನ
31, ಅಕ್ಟೋಬರ್
ನಗರಗಳಲ್ಲಾಗಲಿ ಬದಲಾವಣೆ, ಮತ್ತೆ ಆಗಲಿ ಹವಾಮಾನ ಸ್ಥಿತಿಸ್ಥಾಪನೆ
ಸುಂದರ ನಗರದ ಪುನಃಸ್ಥಾಪನೆಗಾಗಿ ಇಂದೇ ಪ್ರತಿಜ್ಞೆ ಮಾಡೋಣ
ಪ್ಲಾಸ್ಟಿಕ್ ಬಳಸಲ್ಲ
ಎಲ್ಲೆಂದರಲ್ಲಿ ಉಗುಳಲ್ಲ
ರಸ್ತೆಗೆ ತ್ಯಾಜ್ಯ ಎಸೆಯಲ್ಲ
ಕಂಡ ಕಂಡಲ್ಲಿ ಮೂತ್ರ ವಿಸರ್ಜಿಸಲ್ಲ
11 ಸುಸ್ಥಿರ ನಗರಗಳು ಮತ್ತು ಸಮುದಾಯಗಳು
ಸಾರ್ವಜನಿಕ ಸ್ಥಳದಲ್ಲಿ ಧೂಮಪಾನ ಮಾಡಲ್ಲ
ಬನ್ನಿ.. ಸುಸ್ಥಿರ ನಗರ, ಸುಂದರ ಜೀವನಕ್ಕೆ ಕೈ ಜೋಡಿಸಿ

ನವೆಂಬರ್ 14

SDGCC
SUSTAINABLE DEVELOPMENT GOALS COORDINATION CENTRE

GOVERNMENT OF KARNATAKA

UNDP

SUSTAINABLE DEVELOPMENT GOALS



ವಿಶ್ವ ಮಧುಮೇಹ ದಿನ

14, ನವೆಂಬರ್

ಮಧುವೇಹಿಗಳಿಗೆ ಸಿಗಲಿ ಆರೈಕೆ ;
ಈ ಪ್ರವೇಶಾವಕಾಶಗಳಿರಲಿ ಸುಂದರ ಜೀವನಕೆ

ಇನ್ಸುಲಿನ್

ಮೌಖಿಕ ಔಷಧಿಗಳು

ಶಿಕ್ಷಣ ಮತ್ತು ಮಾನಸಿಕ ಬೆಂಬಲ

ಆರೋಗ್ಯಕರ ಆಹಾರ ಮತ್ತು ವ್ಯಾಯಾಮಕ್ಕೆ ಸುರಕ್ಷಿತ ಸ್ಥಳ

ನವೆಂಬರ್ 14

SDGCC
SUSTAINABLE DEVELOPMENT GOALS COORDINATION CENTRE
GOVERNMENT OF KARNATAKA
U N D P
SUSTAINABLE DEVELOPMENT GOALS
ಮಕ್ಕಳ ದಿನಾಚರಣೆಯ
ಶುಭಾಶಯಗಳು
14, ನವೆಂಬರ್
ಪ್ರತಿ ಮಗುವಿಗೆ ಸಿಗಲಿ ಉತ್ತಮ ಭವಿಷ್ಯ
ಸಾಂಕ್ರಾಮಿಕ ರೋಗದ ಮೂಲಕ ಅನುಭವಿಸಿದ ಅಡಚಣೆಗಳು
ಮತ್ತು ಕಲಿಕೆಯ ನಷ್ಟಗಳಿಂದ ಪ್ರತಿ ಮಗು ಚೇತರಿಸಿಕೊಳ್ಳಲಿ
ಸುರಕ್ಷಿತ ಶಾಲೆಗೆ ಮರಳುವಿಕೆ
ಗುಣಮಟ್ಟದ ಕಲಿಕೆ
ಉತ್ತಮ ಪೌಷ್ಟಿಕತೆ
ಸುರಕ್ಷಿತ ಪರಿಸರ
ಸುರಕ್ಷಿತ ಆಟ

ನವೆಂಬರ್ 19

SDGCC
SUSTAINABLE DEVELOPMENT GOALS COORDINATION CENTRE
GOVERNMENT OF KARNATAKA
UNDP
SUSTAINABLE DEVELOPMENT GOALS
ವಿಶ್ವ
ಶೌಚಾಲಯ ದಿನ
19 ನವೆಂಬರ್
ಶೌಚಾಲಯಗಳ ಮೌಲ್ಯ ಅರಿಯೋಣ
ಇದು ಬರೀ ಶೌಚಗೃಹವಲ್ಲ; ಸುರಕ್ಷಾಲಯ
ಲೈಂಗಿಕ ಅಪರಾಧದಿಂದ ಹೆಣ್ಣುಮಕ್ಕಳ ಮತ್ತು ಮಹಿಳೆಯರ ರಕ್ಷಿಸುವ ತಾಣ
ಸುರಕ್ಷಿತ ಆರೋಗ್ಯಕಿದುವೇ ಮಾರ್ಗ
ಕುಡಿಯುವ ನೀರಿನ ಮೂಲ, ನದಿ, ಕಡಲತೀರಗಳ ರಕ್ಷಣಾ ಕವಚ
ಸುರಕ್ಷಿತ – ಆರೋಗ್ಯಕರ ಜೀವನಕ್ಕಾಗಿ ಪ್ರತಿ ಕುಟುಂಬ
ಹೊಂದಲಿ ಮತ್ತು ಬಳಸಲಿ ಶೌಚಾಲಯ
6

ನವೆಂಬರ್ 25

SDGCC
SUSTAINABLE DEVELOPMENT GOALS COORDINATION CENTRE
GOVERNMENT OF KARNATAKA
UNDP
SUSTAINABLE DEVELOPMENT GOALS
ನಿಲ್ಲಿಸಿ
ಅಂತಾರಾಷ್ಟ್ರೀಯ
ಮಹಿಳೆಯರ ವಿರುದ್ಧದ
ಹಿಂಸಾಚಾರ
ನಿರ್ಮೂಲನಾ ದಿನ
25 ನವೆಂಬರ್
ಮಹಿಳೆಗೆ ಬೇಡ - ಹಿಂಸಾಚಾರ, ದೌರ್ಜನ್ಯ
ಪ್ರತಿಯೊಬ್ಬ ಮಹಿಳೆಗೂ ಸಿಗಲಿ ಉಜ್ವಲ ಭವಿಷ್ಯ
ಮಹಿಳೆಯರ ವಿರುದ್ಧ ಹಿಂಸೆಯನ್ನು ವಿರೋಧಿಸಿ
ಮಹಿಳಾ ಸಹಾಯವಾಣಿ
ತುರ್ತು ಸಹಾಯವಾಣಿ
181
112
5 ಲಿಂಗ ಸಮಾನತೆ
10 ಅಸಮಾನತೆಗಳ ಇಳಿಕೆ

ನವೆಂಬರ್ 26

ಸಂವಿಧಾನ ದಿನ

26, ನವೆಂಬರ್

ದೇಶವನ್ನು ಪ್ರೀತಿಸೋಣ; ಸಂವಿಧಾನವನ್ನು ಗೌರವಿಸೋಣ

ರಾಷ್ಟ್ರದ ಕಡೆಗೆ ನನ್ನ ಕರ್ತವ್ಯ ಮತ್ತು ಪ್ರತಿಜ್ಞೆ

ಭಾರತದ ಸಂವಿಧಾನ

ಭಾರತದ ಪ್ರಜೆಗಳಾದ ನಾವು
ಭಾರತವನ್ನು ಸಾರ್ವಭೌಮ, ಸಮಾಜವಾದಿ, ಜಾತ್ಯತೀತ
ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ
ರೂಪಿಸುವುದಕ್ಕಾಗಿ:
ಭಾರತದ ಎಲ್ಲ ಪ್ರಜೆಗಳಿಗೆ
ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು;
ವಿಚಾರ, ಅಭಿವ್ಯಕ್ತಿ, ನಂಬಿಕೆ, ಧರ್ಮ ಮತ್ತು
ಉಪಾಸನೆಯ ಸ್ವಾತಂತ್ರ್ಯವನ್ನು;
ಸ್ಥಾನಮಾನ ಮತ್ತು ಅವಕಾಶಗಳ ಸಮತೆಯನ್ನು
ದೊರೆಯುವಂತೆ ಮಾಡುವುದಕ್ಕಾಗಿ;
ವ್ಯಕ್ತಿಗೌರವ, ದೇಶದ ಏಕತೆ ಮತ್ತು ಸಮಗ್ರತೆಗಾಗಿ ಎಲ್ಲರಲಿ
ಭಾತೃತ್ವ ಭಾವನೆಯನ್ನು ಮೂಡಿಸುವುದಕ್ಕೆ
ದೃಢಸಂಕಲ್ಪ ಮಾಡಿ,
ಈ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡು,
ಅಂಗೀಕರಿಸಿ, ಶಾಸನವಾಗಿ ವಿಧಿಸಿಕೊಂಡಿದ್ದೇವೆ.

ನಡೆ – ನುಡಿಯಿಂದ ಸಂವಿಧಾನವನ್ನು
ಅರ್ಥಪೂರ್ಣಗೊಳಿಸಿ
ನಿರಂತರವಾಗಿ ಅಳವಡಿಸಿ, ಅನುಸರಿಸಿ, ರಕ್ಷಿಸಿ

ಡಿಸೆಂಬರ್ 01

SDGCC
SUSTAINABLE DEVELOPMENT GOALS COORDINATION CENTRE
GOVERNMENT OF KARNATAKA
UNDP
SUSTAINABLE DEVELOPMENT GOALS
ವಿಶ್ವ
ಏಡ್ಸ್ ದಿನ
1, ಡಿಸೆಂಬರ್
3 ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮ
ಏಡ್ಸ್ – ಅಸಮಾನತೆಗೆ ಕೊನೆ ಹಾಡೋಣ
ಯಾರೂ ಹಿಂದುಳಿಯದಂತೆ ನೋಡಿಕೊಳ್ಳೋಣ
ಸೇವೆಗಳು
ಸಮಗ್ರ ಸಮಾಲೋಚನೆ ಮತ್ತು ಪರೀಕ್ಷಾ ಕೇಂದ್ರಗಳು (ಐಸಿಟಿಸಿ) – ಜಿಲ್ಲಾ ಮತ್ತು ತಾಲೂಕು ಆಸ್ಪತ್ರೆಗಳು
ಪೋಷಕರಿಂದ ಮಕ್ಕಳಿಗೆ ಪ್ರಸರಣ ತಡೆ ಕೇಂದ್ರ (ಪಿಪಿಟಿಸಿಟಿ)- ಜಿಲ್ಲಾ ಮತ್ತು ತಾಲೂಕು ಆಸ್ಪತ್ರೆಗಳು
ಆರೈಕೆ ಮತ್ತು ಬೆಂಬಲ ಕೇಂದ್ರಗಳು
suraksha clinic
ಪ್ರತಿ ಜಿಲ್ಲಾ ಆಸ್ಪತ್ರೆಯಲ್ಲಿ ಎಸ್‌ಟಿಐ ಕೇಂದ್ರಗಳು
ಸಹಾಯವಾಣಿ
1097
A.R.T CENTRE
ಎಆರ್‌ಟಿ ಕೇಂದ್ರಗಳಲ್ಲಿ ಉಚಿತ ಎಆರ್‌ಟಿ ಚಿಕಿತ್ಸೆ

ಡಿಸೆಂಬರ್ 03

SDGCC
SUSTAINABLE DEVELOPMENT GOALS COORDINATION CENTRE

GOVERNMENT OF KARNATAKA

UNDP

SUSTAINABLE DEVELOPMENT GOALS



ಅಂತಾರಾಷ್ಟ್ರೀಯ ವಿಕಲಚೇತನರ ದಿನ

3, ಡಿಸೆಂಬರ್

ಸಿಗಲಿ ನಾಯಕತ್ವ – ಪಾಲ್ಗೊಳ್ಳುವಿಕೆಗೆ ಅವಕಾಶ
ವಿಕಲಚೇತನರಿಂದಾಗಲಿದೆ ಸುಸ್ಥಿರ ವಿಕಾಸ

ವಿಕಲಚೇತನರಿಗೆ ನೆರವಾಗುವಿರಾ?

ತಾರತಮ್ಯ ಬೇಡ

ವೈಕಲ್ಯ ಕಳಂಕವಲ್ಲ, ಬೇಡ ತಾರತಮ್ಯ

ಅವರ ಧ್ವನಿಗಳಿಗೆ ಧನಿಯಾಗಿ



ಗೌರವಯುತವಾಗಿ ನಡೆಸಿಕೊಳ್ಳಿ

ಪ್ರತಿ ಸಂಸ್ಥೆಯೂ ಒಳಗೊಳ್ಳಲಿ ವಿಕಲಚೇತನ ಸ್ನೇಹಿ ನೀತಿ

ಸಿಗಲಿ ಕೌಶಲ್ಯ – ಕೌಶಲ್ಯದಿಂದ ಉದ್ಯೋಗ

4 ಗುಣಮಟ್ಟದ ಶಿಕ್ಷಣ

8

10 ಅಸಮಾನತೆಗಳ ಇಳಿಕೆ

11

17 ಗುರಿ ಮುಟ್ಟಲು ಸಹಭಾಗಿತ್ವ

ಡಿಸೆಂಬರ್
05

SDGCC
SUSTAINABLE DEVELOPMENT GOALS COORDINATION CENTRE
GOVERNMENT OF KARNATAKA
U N D P
SUSTAINABLE DEVELOPMENT GOALS
ವಿಶ್ವ
ಮಣ್ಣಿನ ದಿನ
5, ಡಿಸೆಂಬರ್
ತಡೆಯಿರಿ ಮಣ್ಣಿನ ಲವಣಾಂಶ; ಹೆಚ್ಚಿಸಿ ಮಣ್ಣಿನ ಉತ್ಪನ್ನತೆಯ
ನೀವೇನು ಮಾಡಬಹುದು?
ಮಣ್ಣಿನ ಗುಣಮಟ್ಟ ಪರೀಕ್ಷಿಸಿ
ಕೊಟ್ಟಿಗೆ/ಎರೆಹುಳು/ಜೈವಿಕ ಗೊಬ್ಬರ ಬಳಸಿ
ಮಣ್ಣಿನ ತೇವ ರಕ್ಷಣೆಗೆ ಒಣಹುಲ್ಲು-ಎಲೆಗಳ ಹಸಿಗೊಬ್ಬರ ಹೊದಿಸಿ
ಗಿಡ-ಮರ ಬೆಳೆಸಿ; ಕೃಷಿ ಅರಣ್ಯೀಕರಣಗೊಳಿಸಿ
ಮಣ್ಣಿನ ಮೇಲೆ ಯಂತ್ರ ಶೋಷಣೆ ಕಡಿಮೆ ಮಾಡಿ
ಬೆಳೆ ವೈವಿಧ್ಯೀಕರಣಗೊಳಿಸಿ ಮಣ್ಣು ಆರೋಗ್ಯ ಸುಧಾರಿಸಿ
1 ಬಡತನದ ನಿರ್ಮೂಲನೆ
13 ಹವಾಮಾನದ ಬಗ್ಗೆ ಕ್ರಮ
15 ಭೂಮಿ ಮೇಲಿನ ಜೀವರಾಶಿ
ಮಣ್ಣಿನ ಆರೋಗ್ಯ ಕಾರ್ಡ್ ಪಡೆಯಿರಿ;
ಆರೋಗ್ಯಯುತ ಮಣ್ಣಿನಿಂದಾಗಲಿ ಆರೋಗ್ಯಯುತ ಜೀವನ

ಡಿಸೆಂಬರ್ 10

ಅಂತಾರಾಷ್ಟ್ರೀಯ
ಮಾನವ ಹಕ್ಕುಗಳ ದಿನ
10 ಡಿಸೆಂಬರ್



ಸಮಾನತೆಯೇ ಸಾರ್ಥಕತೆ

ಅಸಮಾನತೆಗಳ ತಗ್ಗಿಸೋಣ, ಮಾನವ ಹಕ್ಕುಗಳ ಎತ್ತಿಹಿಡಿಯೋಣ
ಇಲ್ಲಿ ಎಲ್ಲರೂ ಮಾನವರು, ಎಲ್ಲರೂ ಸಮಾನರು

ನೀವೇನು ಮಾಡಬಹುದು..?

- ನಿಮ್ಮೆಲ್ಲ ಕೆಲಸ-ಕಾರ್ಯಗಳಲಿ ಮಾನವ ಹಕ್ಕುಗಳ ಉತ್ತೇಜಿಸಿ
- ಇತರರಿಗೆ ಕೆಡುಕು ಮಾಡದಿರಿ, ಮಾನವ ಹಕ್ಕುಗಳ ಗೌರವಿಸಿ
- ಸಕಾರಾತ್ಮಕ ನೆರವು ನೀಡಿ, ಮಾನವ ಹಕ್ಕುಗಳ ರಕ್ಷಿಸಿ

ಹುಟ್ಟಿದ ಪ್ರತಿಯೊಬ್ಬರಿಗೂ ಮುಕ್ತವಾಗಿ ಸಿಗಲಿ ಘನತೆ ಮತ್ತು ಹಕ್ಕುಗಳು - ಯುಡಿಎಚ್‌ಆರ್‌ನ ಅನುಚ್ಛೇದ 1

ಡಿಸೆಂಬರ್ 12

SDGCC
SUSTAINABLE DEVELOPMENT GOALS COORDINATION CENTRE
GOVERNMENT OF KARNATAKA
UNDP
SUSTAINABLE DEVELOPMENT GOALS
ಅಂತಾರಾಷ್ಟ್ರೀಯ
ಸಾರ್ವತ್ರಿಕ
ಆರೋಗ್ಯ
ವಿಮಾ ದಿನ
12, ಡಿಸೆಂಬರ್
ಆರೋಗ್ಯ ವಂಚಿತರಾಗದಂತೆ ತಡೆಯೋಣ ;
ಸುಸ್ಥಿರ ಆರೋಗ್ಯ ವ್ಯವಸ್ಥೆಯ ರೂಪಿಸೋಣ
ಪಡೆಯಿರಿ ಸರ್ಕಾರಿ ಉಚಿತ ಆರೋಗ್ಯ ವಿಮಾ ಸೇವೆ
ಬಿಪಿಎಲ್ / ಎಪಿಎಲ್ ಕುಟುಂಬಗಳಿಗೆ
ಆಯುಷ್ಮಾನ್ ಭಾರತ್- ಆರೋಗ್ಯ ಕರ್ನಾಟಕ ಯೋಜನೆ
ವಿಮಾ ಮಿತಿ
ಬಿಪಿಎಲ್‌ಗೆ ವಾರ್ಷಿಕ
5 ಲಕ್ಷ ರೂ.
ಎಪಿಎಲ್‌ಗೆ ವಾರ್ಷಿಕ
1.50 ಲಕ್ಷ ರೂ. (ಶೇ.30)
1 ಬಡತನದ ನಿರ್ಮೂಲನೆ
ಬೇಕಿರುವ ದಾಖಲೆಗಳು
ಆಧಾರ್ ಕಾರ್ಡ್ ಮತ್ತು ಪಡಿತರ ಕಾರ್ಡ್
3 ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮ
ನಿಮ್ಮ ಕಾರ್ಡ್ ಮಾಡಿಸಲು ಇಲ್ಲಿ ಭೇಟಿ ನೀಡಿ
ಗ್ರಾಮ ಪಂಚಾಯಿತಿ / ಪಿಹೆಚ್‌ಸಿ / ಬ್ಲಾಕ್ ಅಥವಾ ಜಿಲ್ಲಾ ಆಸ್ಪತ್ರೆ /
ಕರ್ನಾಟಕಒನ್ / ಬೆಂಗಳೂರುಒನ್ / ಸೇವಾ ಸಿಂಧು ಕೇಂದ್ರಗಳು
ಹೆಚ್ಚಿನ ಮಾಹಿತಿ/ಸಂಪರ್ಕಕ್ಕೆ ಆರೋಗ್ಯ ಸಹಾಯವಾಣಿ: 104
ಅಥವಾ ಟೋಲ್ ಫ್ರೀ ಸಂಖ್ಯೆ: 1800-425-8330

ಡಿಸೆಂಬರ್ 14

SDGCC
SUSTAINABLE DEVELOPMENT GOALS COORDINATION CENTRE

GOVERNMENT OF KARNATAKA

UNDP | SUSTAINABLE DEVELOPMENT GOALS

ರಾಷ್ಟ್ರೀಯ ಇಂಧನ ಸಂರಕ್ಷಣಾ ದಿನ

14, ಡಿಸೆಂಬರ್

ಇಂಧನ ದಕ್ಷ ಭಾರತ ನಮ್ಮದಾಗಲಿ

ನವೀಕರಿಸಬಹುದಾದ ಇಂಧನ ಬಳಸಿ

ಇಂಧನ ದಕ್ಷತೆ ನಮ್ಮೆಲ್ಲರ ಕರ್ತವ್ಯವಾಗಲಿ ಮನೆ, ಕಚೇರಿ, ಪರಿಸರದಲಿ ಅನುಷ್ಠಾನಗೊಳ್ಳಲಿ

ಇಂದೇ ಪ್ರತಿಜ್ಞೆ ಮಾಡೋಣ

- ಸೌರಶಕ್ತಿಯಂತಹ ನವೀಕರಿಸಬಹುದಾದ ಇಂಧನವನ್ನೇ ಬಳಸುತ್ತೇನೆ
- ವಿದ್ಯುತ್ ಸಂಬಂಧಿತ ಉಪಕರಣಗಳ ಬಳಕೆ ಮುಗಿದಾಗ ಸ್ವಿಚ್ ಆಫ್ ಮಾಡುತ್ತೇನೆ
- ವಿದ್ಯುತ್ ಗಾಡಿಯನ್ನು ಬಳಸಿ
- ಇಂಗಾಲದ ಹೊರಸೂಸುವಿಕೆ ತಗ್ಗಿಸಲು ಬೈಕ್, ನಡಿಗೆ ಅಥವಾ ಸಾರ್ವಜನಿಕ ಸಾರಿಗೆಯನ್ನೇ ಬಳಸುತ್ತೇನೆ
- ಪರಿಸರಸ್ನೇಹಿ ಕಟ್ಟಡಕ್ಕೆ ಆದ್ಯತೆ ನೀಡುತ್ತೇನೆ

ಇಂಧನ ಉಳಿಸಿ - ಭೂಮಿಯ ರಕ್ಷಿಸಿ

ಡಿಸೆಂಬರ್ 22

SDGCC
SUSTAINABLE DEVELOPMENT GOALS COORDINATION CENTRE

GOVERNMENT OF KARNATAKA

UNDP | SUSTAINABLE DEVELOPMENT GOALS

ರಾಷ್ಟ್ರೀಯ ಗಣಿತ ದಿನ

22 ಡಿಸೆಂಬರ್

ಗಣಿತದಲಿ ವಿನೋದವಿದ್ದರೆ ಸುಲಲಿತ

1x1 = 1

11 x 11 = 121

111 x 111 = 12321

1111 x 1111 = 1234321

11111 x 11111 = 123454321

111111 x 111111 = 12345654321

1111111 x 1111111 = 1234567654321

11111111 x 11111111 = 123456787654321

111111111 x 111111111 = 12345678987654321

4 ಗುಣಮಟ್ಟದ ಶಿಕ್ಷಣ

ಗಣಿತವು ಜೀವನದ ಮೂಲಭೂತ ವಿಜ್ಞಾನಗಳಲ್ಲಿ ಒಂದು. ಇದು ಎಲ್ಲಾ ಸೃಷ್ಟಿಯ ತೊಟ್ಟಿಲು, ಗಣಿತವಿಲ್ಲದೆ ಜಗತ್ತಿನ ಬಂಡಿ ಚಲಿಸಲು ಸಾಧ್ಯವಿಲ್ಲ

ಸುಸ್ಥಿರ ಅಭಿವೃದ್ಧಿ ಗುರಿಗಳು

1 ಬಡತನದ ನಿರ್ಮೂಲನೆ

2 ಹಸಿವು ಮುಕ್ತ

3 ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮ

4 ಗುಣಮಟ್ಟದ ಶಿಕ್ಷಣ

5 ಲಿಂಗ ಸಮಾನತೆ

6 ಸ್ವಚ್ಛ ನೀರು ಮತ್ತು ನೈರ್ಮಲ್ಯ

7 ಅಗ್ಗವಾದ ಮತ್ತು ಶುದ್ಧ ಶಕ್ತಿ

8 ಗೌರವಯುತ ಕೆಲಸ ಮತ್ತು ಆರ್ಥಿಕ ಬೆಳವಣಿಗೆ

9 ಉದ್ಯಮ, ಆವಿಷ್ಕಾರ ಮತ್ತು ಮೂಲ ಸೌಕರ್ಯಗಳು

10 ಅಸಮಾನತೆಗಳ ಇಳಿಕೆ

11 ಸುಸ್ಥಿರ ನಗರಗಳು ಮತ್ತು ಸಮುದಾಯಗಳು

12 ಜವಾಬ್ದಾರಿಯುತ ಬಳಕೆ ಮತ್ತು ಉತ್ಪಾದನೆ

13 ಹವಾಮಾನದ ಬಗ್ಗೆ ಕ್ರಮ

14 ಜಲದ ಜೀವರಾಶಿ

15 ಭೂಮಿ ಮೇಲಿನ ಜೀವರಾಶಿ

16 ಶಾಂತಿ, ನ್ಯಾಯ ಮತ್ತು ಸದೃಢ ಸಂಸ್ಥೆಗಳು

17 ಗುರಿ ಮುಟ್ಟಲು ಸಹಭಾಗಿತ್ವ

ಸುಸ್ಥಿರ ಅಭಿವೃದ್ಧಿ ಗುರಿಗಳ ಸಮನ್ವಯ ಕೇಂದ್ರ

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ
7ನೇ ಮಹಡಿ, ಗೇಟ್ ನಂ.3 ಬಹುಮಹಡಿ ಕಟ್ಟಡ,
ಡಾ. ಅಂಬೇಡ್ಕರ್ ವೀಧಿ ಬೆಂಗಳೂರು-560001

@sdgcckar